Sectt. II 43—2,388—9-2-20.

Home (192/) Department.
(Miscellaneous)

Ordinary SERIES.

G.O. No. 328

DATED 3/3/1924

[Despatch Abstract.]

Census.

Petition from Mr. Shetti Pegichettier, Madras, regarding caste classification of Veerashaivaites.

Home Misc. C. No. 589
4.2.21

Pass Ellis

REGR. CHIEF SECTT.
-3 FEB 1921
MADRAS GOVT.

46, Anumantaroyan Street,
Park Town,
Madras, 1st February 1921.

SECRETARIAT TO GOVT.
-4 FEB 1921
HOME DEPARTMENT
-4 FEB 1921

From,

Mr. Chetti Nagichettiar,
Govt. pensioner & Merchant,

To,

The Chief Secretary to Government of Madras,
Fort Saint George.

Sir,

I have the honor to bring the following few lines for your kind perusal and favourable consideration :-

1. It has hitherto been a general rule observed by the Government of Madras during the time of Census operation to classify the Hindus as Brahmins, Kshatryas, Vaishyas, Shudras and Panchamas.

2. The modern civilisation has come to such a state that the literate classes began to study their past history and their present status of life and to get themselves elevated to a much higher position spiritually, politically, economically, etc

3. The silkweaving classes viz. Patnulkars claim themselves to be called as Sowrashtra-brahmins, the artisan classes viz. Blacksmiths, Goldsmiths, Carpenters and Stone-cutters as Viswa-brahmins, the toddy-drawing classes viz. Shanars or Nadars and agricultural classes viz. Pallis or Vanniars as Kshatryas, the backward and depressed classes viz. Panchamas as Adi-Dravidas and the modern non-brahmin classes mainly composed of Shudras who have hitherto been under the religious control of the Brahmins, began to get themselves liberated from their control for reasons best known to them.

GA

4. There exists a class of high caste ~~~~ Hindus known as Veerashaivites to whose class I have the honor to belong and who are never under the religious control of the Brahmins. Their population is considerably large in the Bombay presidency and in the Mysore province and is fair in the Madras presidency. Having learnt that they are classified in the census reports in the Bombay presidency as Lingi-brahmins, and that in the Mysore province as Lingadharis or Veerashaiva-brahmins, Lingadhari or Veerashaiva-kshatryas and Lingadhari or Veerashaiva-Shudras (vide Proceedings of the Government of H.H. The Maharaja of Mysore, No. Fb 3961, Census 31 - 10, dated 25th. January 1911, published in the " Mysore Star " dated 23rd. January 1921 which is herewith forwarded) and that in the Madras presidency they are indiscriminately returned in a column intended to group the lower classes, I beg to point out that what the Madras Government had already done in the case of Veerashaivites is a great mistake without careful study of the greatness of their religion and that they are also equally to blame for not bringing the matter to the notice of the Government much earlier for necessary action. It is high time that necessary steps should now be taken to pay due regard to the Veerashaiva community and to return them at least as Lingadharis or Veerashaivites in a separate column. If the Government are kind enough to instruct the Village Magistrates to pay special attention in helping the census officials in the matter, the work could be easily facilitated . Veerashaivites are found everywhere, but in large numbers in the Bellary district and in small numbers scattered throughout the other districts and they go by different names as Seelavanthas in the North, as Lingayets, Lingadharis and Veerashaivites in Central parts and as Lingadharis, Veerashaivites, Shivachars, Shivabaktas and XXXXXXXXX Kannadiars in the South. There is another class of Hindus called Pandarams, Jangalis, Jangams, Devangas and Kurubas

3/4

who are not recognised as Lingadharis or Veerashaivites although they wear Lingam round their neck, just in the same way as all threadwearing Hindus are not recognised as Brahmins.

5. I beg to state that the fact that the superiority of Veerashaivism chiefly based upon Gnanamarga as propounded in the Vedas, Agamas, Puranas and Upanishads has been universally accepted by the Hindus of all castes, is beyond dispute. Veerashaivism was kept down for sometime by the Brahmins, Jains, Buddhists and Atheists who were once predominant in India. It was revived by Lord Basava who flourished in the twelfth century. He was born in Kappadi village near Bagavadi. He made Kalyanagar as his residential quarters. He was a Prime Minister to the king of Bijjalanagar in the Bombay presidency. He criticised the doctrines of other religionists, condemned the Karmamarga of the Brahmins and re-established Veerashaivism throughout India. His spiritial and intellectual faculties were represented as greater than those of other reformers. He was recognised as an incarnation of Nandigeswara and said to be endowed with supernatural powers and virtues.

6. I am, therefore, justified in asking the Government to give serious consideration for my representation and solicit early orders as the Census takes place next month.

I have the honor to be,

Sir,

Your most obedient servant,

C.C. Napichetti.

S.N.M.

(1921 - 1922)

7

From,

Mr. Chetti Nagichettiar,

Govt. pensioner & Merchant,

M a d r a s.

To,

The Chief Secretary to

Government of Madras,

Fort Saint George.

Dated. 14)
Despt. 24 } February 1921.
Recd.)

No. Nil.
Enc : 7

Census.

Soliciting orders for the Classification of the Lingadharis or Veerashaivites under a separate column during the ensuing _____

REGISTERED NO. M. 124.

ಮೈಸೂರು ಸ್ಟಾರ್

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ನಮಶ್ಶಾರಪುರೀತಾರಾ ಪರಮಧಿಗತರಾಜಮಂಡಲಹೃತ್ಪ್ರಿಯಾ | ನಷಧಕೃತಾವತಾರಾ ಪಶ್ಯಜ್ಜನಹೃತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ವದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಭವಂ ಸದ್ಯೃತ್ತಮಾಲಾಳುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೬-೦]

[ಆಂಚೆವೆಚ್ಚ ಸೇರಿ ೨-೪-೦]

REGISTERED NO. M. 124.

ಸಂಪುಟ ೩೪) ಮೈಸೂರ್ ಸ್ಟಾರ್ ಸರ್ಕ್ಯುಲೇಶನ್ ನೆಯ ಇಸವಿ ಜನವರಿ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೪

ಪಾಳ್ಯದ ವೆಂಕಟಾಚಲಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು.

1. ಲಕ್ಷ್ಮೀವಿಲಾಸರಸ (ಪ್ಲೇಗಿಗೆ)——ಲಕ್ಷ್ಮೀಪಲಕ್ಷ್ಮ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರೆ ತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೇಸೆಯು ತಮ್ಮಲ್ಲಿದ್ದಳ ಪ್ಲೇಗಿಗೆ ಸರ್ವೋತ್ತಮ ಗುಣಕಾರಿಯಾದ ಸಿದ್ಧೌಷಧಿಯು ಬೇರೊಂದಿಲ್ಲವೆಂ ದು ತಾವೇ ಹೇಳುವರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೇಸೆಗೆ 1 ರೂ. 5 ಕ್ಕೆ 1 ಇನಾಂ.

2. ಶ್ರೀನಿವಾಸತೈಲ——ಪ್ಲೇಗಿನಗಡ್ಡೆ ಕರಗುತ್ತದೆ. ಸಂದುಗು ನೋವು ಸೇದಲು ಹೋಗುತ್ತದೆ. ಸೇಸೆಗೆ 8 ಆಣೆ. 5 ಕ್ಕೆ 1 ಇನಾಂ.

3. ವೈಶ್ವಾನರಾಸವ——ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತ ಬರುತ್ತ ವೆ. ಸೇಸೆಗೆ 1 ರೂ. 5 ಕ್ಕೆ 1 ಇನಾಂ.

4. ಬಾಲಸುಖೋದಯ——ಮಕ್ಕಳಿಗೆ ಬಲಕಾರಿ, ಸಿಹಿಯಾಗಿರು ತ್ತದೆ. ಮಂದ, ಮಲಬದ್ಧ, ಅಜೀರ್ಣದಭೇದಿ, ಕೃಶತ್ವ, ಹೊಟ್ಟೆ ದಪ್ಪವಾ ಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ

ಪುಷ್ಟಿಯುಳ್ಳವರಾಗುತ್ತಾರೆ. ಸೇಸೆಗೆ 12 ಆಣೆ. 5 ಕ್ಕೆ 1 ಇನಾಂ. ಈ ನಾಲ್ಕಕ್ಕೂ ಟಪಾಸಿಲು ಖರ್ಚು ಬೇರೆ.

5. ಲೋಕಾಮಯಹರಕಸ್ತೂರಿಮಾತ್ರೆಗಳು——ಮಕ್ಕಳಿಗೆ, ದೊಡ್ಡವರಿಗೆ, ಮುದುಕರಿಗೆ, ಬಾಣಂತಿಯರಿಗೆ ಉತ್ತಮ ಗುಣಕಾರಿ. ಮಂದ, ನೆಗಡಿ, ಕವ್ಮಲು, ಅಜೀರ್ಣ, ಶೀತವಾತ, ಪಾರ್ಶ್ವವಾಯು, ಮಲಬದ್ಧ, ಜ್ವರ ಚಳಿಜ್ವರ, ದುರ್ಬಲ ಹಾಗೂ ವ್ಯತ್ಯಸವಿಂದ ಬರಬಹುದಾದ ಇನ್ನೂ ಅನೇಕ ರೋಗಗಳು ಗುಣವಾಗುತವೆ. ಕಾಲು. ಔನ್ಸು ಸೇಸೆಗೆ 4 ಆಣೆ. ಟಪಾಲು ಖರ್ಚು ಸೇರಿ 8 ಆಣೆ. 6 ಸೇಸೆಗೆ 1-8-0. 12 ಕ್ಕೆ 2-13-0, 25 ಕ್ಕೆ 5-3-0,

ನಮ್ಮ ವಿಳಾಸ:——ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

3

ಉತ್ತಮ ವೀರಶೈವ ಗ್ರಂಥಗಳು.

ಬಸವರಾಜ ವಿಜಯಂ.——ಬೆಲೆ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.——ಬೆಲೆ ೧-೧೦-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಗೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಸ್ಖಾವರಣ, ಕರಣಹಸುಲೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.——ಬೆಲೆ ೧ ರೂ. ನಿಜಗುಣಾ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ——ಬೆಲೆ ೧-೫-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರೆಯನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.——ಬೆಲೆ ೧——೨——೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.——ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ; ಸಟೀಕ. ೧ ನೆ ಪ್ರಕರಣಕ್ಕೆ ೧-೫-೦. ೨ ನೆ ಪ್ರಕರಣಕ್ಕೆ ೧——೨——೦ ೩ ನೇ ವಾದಪ್ರಕರಣಕ್ಕೆ ೧-೫-೦.

ಸೌಂದರಪುರಾಣಂ-೧-೫-೦; ಸಟೀಕ ಶಿವಸೂತ್ರರತ್ನ ೮ ಆಣೆ; ದೇವೀ ಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೮ ಆಣೆ. ಸ್ತುತಿಮುಕ್ತಾವಳಿ ೮ಆಣೆ; ರತ್ನಾಶತಕ ೨ಆಣೆ; ಶಂಕರಲಿಂಗಕಂದಂ ೧ಆಣೆ.

ಸಿದ್ಧಾಂತಶಿಖಾಮಣಿ, ರೇವಣಸಿದ್ಧೇಶ್ವರ ಪುರಾಣ, ಸಟೀಕ ದೀಕ್ಷಾವಿಧಿ, ತತ್ವಪ್ರಕಾಶಿಕೆ, ಸಟೀಕ ಶತಕತ್ರಯ ಈ ಗ್ರಂಥಗಳ ಆಜ್ಞಾಗಿದ್ದ ಪ್ರತಿಗಳೆಲ್ಲಾ ಮುಗಿದುಹೋಗಿವೆ. ಮರಳಿ ಆಜ್ಞಾದನಂತರ ಪ್ರಕಟಿಸುತ್ತೇವೆ. ಆದುವರೆಗೂ ಈ ಗ್ರಂಥಗಳನ್ನು ಕೋರಿ ಯಾರೂ ಬರೆಯಬಾರದು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ನಿ. ಪಿ. ಪೊಸ್ಟೇಜು ಸೇರಿ.

ಸಟೀಕ ವೀರಶೈವ ವಿವಾಹವಿಧಿ:	೦——೧೨——೦
ಶಿವಪೂಜಾವಿಧಿ:	೦——೧೪——೦
ಚಾರುಶೀಲಚರಿತ್ರೆ	೦—— ೯——೦
ಹರಿದಾಸ	೦—— ೪——೦

ಲಂಡನ್ ಲೀವರ್ ವಾಚ್.

ಈ ತಿಂಗಳೊಳಗಾಗಿ ಕೊಳ್ಳುವವರಿಗೆ 11 ಬಹುಮಾನ. 4 ವರ್ಷ ಗ್ಯಾರಂಟಿ ಸಹಿತ ಕ್ರಯ 1 ಕ್ಕೆ 4——8——0.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೋವೆಮೆಂಟ್ಸ್‌ಗಳಿಂದ ಮಾಡಿದೆ. ಫಾಳಿ ಧೂಳು ಸೇರದಂತೆ ಹಿಂಭಾಗದಲ್ಲಿಗ್ಲಾಸ್ ಡೂಮು ಮತ್ತು ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಲು ಕೆತ್ತಲ್ಪಟ್ಟಿವೆ. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಬಹುಮಾನಗಳ ವಿವರ:——

ಕರವಸ್ತ್ರ 1, ಕನ್ನಡಿ 1, ಗುಂಡಿಗಳು 4, ಗಿಲೀಟಿನ ರೋಜಾ ಹುವ್ವು 1, ಬೀಸಣಿಗೆ 1, ಬ್ರೋಚ್ 1, ಬಾಚಣಿಗೆ 1, ಸೆಂಟ್ ಬಾಡ್ಡಿ 1, ಜುಮ್ಲಾ 11 ಸಾಮಾನುಗಳ ಸಹಿತ 4——8——0.

AMERICAN 8 CORNER RADIUM WRIST WATCHT.

ಅಮೆರಿಕಾದೇಶದ ೮ ಮೂಲೆ ರೇಡಿಯಂ ರಿಸ್ಟ್ ವಾಚ್.

ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವದು. ಇವು ಅಮೆರಿಕಾ ದೇಶದ ಗಡಿಯಾರಗಳು ಬಹು ದಿನ ಬಾಳಿಕೆ ಬರುವುದು. ಯಾರೇ ಆಗಲಿ ಈ ಗಡಿಯಾಗಳಿಂದ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಕ್ರಯ ಸರಪಣಿ ಸಹಿತ 8-0-0 ಸೀಮೆ ಚಕ್ಕಳದ ಪಟ್ಟಿ ಸಹಿತ 7-0-0.



ROUND RADIUM WRIST WATCHT.

ರೌಂಡು ರೇಡಿಯಂ ರಿಸ್ಟ್ ವಾಚು.



ಕ್ರಯ ಸರಪಣಿಸಹಿತ 7-0-0, ಸೀಮೆಚಕ್ಕಕ್ಕಳದ ಪಟ್ಟಿಸಹಿತ 6-0-0, ರೇಡಿಯಂ ಇಲ್ಲದ ಸಾದಾ ರಿಸ್ಟ್‌ವಾಚು 5-0-0, ಸರಪಣಿ ಸಹಿತ 6-0-0

43 ವಿಳಾಸ:——ಧೈರ್ಯಲಕ್ಷ್ಮಿ ಅಂಡ್ ಕೋ,
ಪೋಸ್ಟ್‌ಬಾಕ್ಸ್ ನಂಬರ್ 265 ಮದರಾಸು.

SINEMATOGRAPH.

ಸಿನಿಮೊಟೊಗ್ರಾಫ್.

43

ಈ ಯಂತ್ರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇದರಲ್ಲಿರುವ ಚಿತ್ರಪಟಗಳನ್ನು ಯಂತ್ರದಲ್ಲಿ ಹಾಕುವಾಗಲೂ ತೆಗೆಯುವಾಗಲೂ ನೋಡಿದರೆ ಬಯಸ್ಕೋಪಿನಂತೆ ಆಶ್ಚರ್ಯವಾಗಿ ರೈಲು ಹೋಗುವದು, ಚೀನಾದೇಶೀಯರ ಕೈಗಾರಿಕೆ, ನಾಟಕ ಮುಂತಾದ ಅನೇಕ ವಿನೋದಗಳು ಬಹು ಆಶ್ಚರ್ಯವಾಗಿ ಕಾಣುವವು. ಇದು ಮಾತ್ರ ಒಂದು ಇದ್ದರೆ ಜಾತ್ರೆಗಳು ಪರಿಸೆಗಳು ಮುಂತಾದ ಸ್ಥಳಗಳಲ್ಲಿ ಬಂದವರಿಗೆ ಈತಮಾಸೆಯನ್ನು ತೋರಿಸಿ ಹೇರಳವಾದ ಹಣವನ್ನು ಸಂಪಾದನೆ ಮಾಡಬಹುದು. ಇದನ್ನು ಪ್ರತಿಯೊಬ್ಬರೂ ಅತಿ ಸುಲಭವಾಗಿ ತೋರಿಸಬಹುದು. ಇದು ಹೆಚ್ಚಾಗಿ ಖರ್ಚು ಆಗುವದರಿಂದ ಆವರವರು ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ಅನಂತರ ಸಿಕ್ಕಲಾರದು. ಕ್ರಯ 16 ಚಿತ್ರ ಪಟಗಳು ಸೇರಿ ಯಂತ್ರ 1ಕ್ಕೆ 1——0——0.

ಈ ಕ್ರಯ ಒಂದು ತಿಂಗಳವರೆಗೆ ಮಾತ್ರವೆ ಅನಂತರ ಸಿಕ್ಕಲಾರದು. ಈ ವಿಷಯದಲ್ಲಿ ಎಚ್ಚರರಾಗಿರಬೇಕು.

ನಮ್ಮ ವಿಳಾಸ:——ರಾಸ್‌ವಾಚ್ ಅಂಡ್ ಕಂಪನಿ,
3. ಇರುಳಪ್ಪನಬೀದಿ, ಮದರಾಸು.

ಸತ್ಯಮೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ ಪಥ್ಯ ಮದನೋದ್ಭವ ಗುಳಿಗೆ. ಇಲ್ಲ.

(ಗುಣವಾಗದಿದ್ದರೆ ಹಣ ಪರತ).

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯು ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟೂಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಕರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು ಮುಂತಾದವು ಅತಿತ್ವರ್ಯ ಗುಣವಾಗಿ ಶರೀರಕ್ಕೆ (ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

ನಪುಂಸಕತ್ವಾರಿ ತೈಲವು. 48

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನು ಸುಖವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಯನ್ನು ಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೨ ಆಣೆ. ಅನುಪಾನಪತ್ರಿಕೆ ಔಷಧಿ ಸಂಗಡ. ಟಪಾಲುಖರ್ಚು ಬೇರೆ. ಪ್ರಕೃತಿ ತಿಳಿಸಿದರೆ ಉತ್ತಮ.

ವಿಳಾಸ——ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ನಂ. 7 ಪೋಸ್ಟ್ ಶಿರ್ಕಿ ಉತ್ತರಕನಡಾ.

ಮದನಮಂಜರಿ ಮಾತ್ರೆಗಳು.

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಹಸಿವು ಇಲ್ಲದಿದರೂ ಕೈಕಾಲು ಸೊಂಟದಲ್ಲಿ ನೋವಿದ್ದರೂ ಮತ್ತು ಕಾಯಶಕ್ತಿಯೂ ಪೌರುಷವೂ ಕೆಟ್ಟಿದ್ದರೂ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನೂ ಗಂಟೆಗಂಟೆಗೂ ಗುಣಮಾಡುವದು ಇದು ವನಸ್ಪತಿಯ ಮೂಲಿಕೆಗಳಿಂದ ತಯಾರಿಸಿದ್ದು. ಕ್ರಯ ಡಬ್ಬಿ 1 ಕ್ಕೆ 1-0-0.

18 ವೈದ್ಯವಿದ್ಯ

ಈ ಪುಸ್ತಕವನ್ನು ಓದುವದರಿಂದ ವ್ಯಾಧಿಗಳು ಹೇಗೆ ಉಂಟಾಗುವವು ಎಂಬುದನ್ನೂ ಮತ್ತು ಹೇಗೆ ಗುಣಮಾಡಿಕೊಳ್ಳಬೇಕೆಂಬುದನ್ನೂ ವಿವರವಾಗಿ ತಿಳಿಸುವದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ. ಕಾಲಾನೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ಬರೆದು ತಿಳಿಸಿದರೆ ಸಾಕು, ಸದರಿ ವೈದ್ಯವಿದ್ಯ ಪುಸ್ತಕವು ನಿಮ್ಮ ಮನೆಯ ತಲಬಾಗಿಲಿಗೆ ಬಂದು ಸೇರುವದು.

ವಿಳಾಸ:——ಮದನಮಂಜರಿ ಫಾರ್ಮಸಿ,
27. ಜೈನಾಬಜಾರು ರೋಡ್ ಮದರಾಸು.

ಶ್ರೀ ದುರ್ಮತಿನಾಮಸಂವತ್ಸರದ ಅತ್ಯುತ್ತಮ ಪಂಚಾಂಗ. 8

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಆದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕ ರವಿಚಂದ್ರಯೋಗ ಪತಿತಸ್ಥಾನಗಳನ್ನು ಬರೆದು ಗ್ರಹ ಕುಂಡಲಿಯನ್ನು ಹಾಕಿ ಇಂತಿಷ್ಟೇ ಈ ಮಳೆಯು ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತಾ ದಿ ಅನೇಕ ಪ್ರಶ್ನೆಗಳನ್ನೂ ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನೂ ಅನುಭವಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನೂ ಇಲ್ಲಿ ತಿಳುಹಿಸಲು ಸಾಧ್ಯವಿಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗವೆಂದು ಸಹಜವಾಗಿ ತಿಳಿಯುವದು.

ಕಳೆದ ವರ್ಷಗಳಿಗಿಂತಲೂ ಈ ವರ್ಷ ಕಾಗದ ಮುಂತಾದವುಗಳು ವಿಶೇಷ ತೇಜಿಯಾಗಿ ಪ್ರಿಂಟಿಂಗ್ ಖರ್ಚು ಹೆಚ್ಚು ಹಿಡಿದಿದ್ದರೂ, ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೫) ನ್ನು ಒಂದೇ ಸಾರಿ ತೆಗೆದು ಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಆರ್ಡರು ಕೊಡಿರಿ ಚಿಲ್ಲರೆ ಒಂದಕ್ಕೆ ಕ್ರಯ ೪ ಆಣೆ.

ವಿಳಾಸ:——ಬ್ರಂ|| ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮೈಸೂರು ಸ್ಟಾರ್

೧೯೧೧ನೆ ಇಸವಿಯ ಜನವರಿ ತಾ|| ೨೩ನೆಯ ಭಾನುವಾರ.

ಜನಪರಿಗಣನೆತಿ ಮತ್ತು ವೀರಶೈವರು.,

೧೦ ವರ್ಷಕ್ಕೊಂದುಸಲ ನಡೆಯುವ ಜನಪರಿಗಣನೆತಿಯ ಕೆಲಸವು ಈಗ ನಡೆಯಲಿಕ್ಕಿದೆ. ಅದಕ್ಕೆ ಸಂಬಂಧಪಟ್ಟ ತಿಳಿವಿಕೆಗಳನ್ನು ಕೊಡುವ ಪ್ರಕಟನಪತ್ರಗಳು ಸರ್ಕಾರದಿಂದ ಹಂಚಲ್ಪಟ್ಟಿವೆ. ಲೆಕ್ಕಗಳನ್ನು ಬರೆದುಕೊಳ್ಳುವ ಇನ್ಯೂಮರೇಟರುಗಳೂ, ಅವರ ಮೇಲಿನ ವಿಚಾರಣಕರ್ತರಾದ ಸೂಪರ್ವೈಜರುಗಳೂ, ಅವರ ಮೇಲಣ ಅಧಿಕಾರಿಗಳೂ, ಅನುಸರಿಸಬೇಕಾದ ನಿಯಮಗಳೆಲ್ಲಾ ಇವುಗಳಲ್ಲಿ ವಿವರಿಸಲ್ಪಟ್ಟಿವೆ. ಪ್ರಜಾಸಂಖ್ಯೆಯಲ್ಲಿ ಗಂಡೆಷ್ಟು ಹೆಣ್ಣೆಷ್ಟು ಮಕ್ಕಳೆಷ್ಟು ಮದುವೆಯಾದವರೆಷ್ಟು ಓದುಬರಹ ಬಲ್ಲವರೆಷ್ಟು ಬರದಿದ್ದವರೆಷ್ಟು ಇತ್ಯಾದಿ ವಿವರಣಗಳನ್ನು ತಿಳಿಯಬೇಕೆಂಬುದು ಜನಪರಿಗಣನೆತಿಯ ಉದ್ದೇಶವೇ ಹೊರತು, ಬೇರೆಬೇರೆ ಮತಜಾತಿಗಳ ಅಥವಾ ಕುಟುಂಬಗಳ ಪರಸ್ಪರ ಶ್ರೇಷ್ಠತ್ವ ಕನಿಷ್ಠತ್ವಗಳನ್ನು ತಿಳಿಯಬೇಕೆಂಬುದು ಇದರ ಉದ್ದೇಶವಲ್ಲ. ಆದುಕಾರಣ ಸಕಲ ಪ್ರಜೆಗಳೂ ತಮ್ಮತಮ್ಮ ವಿಷಯಗಳನ್ನು ಕರಾರ್ವಾಕಾ ಹೇಳಿ ಬರೆಯಿಸುವುದರಲ್ಲಿ ಸಂಕೋಚಪಡಬೇಕಾದುದಿಲ್ಲವೆಂದು ಸರ್ಕಾರದವರು ಇದರಲ್ಲಿ ತಿಳಿಯಪಡಿಸಿದ್ದಾರೆ. ಇದು ಒಪ್ಪತಕ್ಕುದೇ ಸರಿ. ಈ ಲೆಕ್ಕಗಳಿಂದ ಸರ್ಕಾರದವರಿಗೆ ಮಾತ್ರವೇ ಪ್ರಯೋಜನವೆಂದು ತಿಳಿಯಬಾರದು. ಪ್ರತಿಯೊಬ್ಬ ಪ್ರಜೆಗೂ ಇದರಿಂದ ಲಾಭವುಂಟು. ಪ್ರತಿಯೊಂದು ಜನವರ್ಗವೂ ೧೦-೧೦ ವರ್ಷಕ್ಕೆ ತಾವು ಸಂಖ್ಯೆಯಲ್ಲೂ ವಿದ್ಯೆ ಮೊದಲಾದುವುಗಳಲ್ಲೂ ಹೀನಸ್ಥಿತಿಗೆ ಬಂದಿದ್ದೇವೆಯೆ? ಅಭಿವೃದ್ಧಿಮುಖವಾಗಿದ್ದೇವೆಯೆ? ಎಂಬ ಸಂಗತಿಗಳನ್ನೆಲ್ಲಾ ಇದರಿಂದ ತಿಳಿದುಕೊಂಡು ಮುಂದೆ ಅನುಸರಿಸಬೇಕಾದ ಪ್ರಯತ್ನಗಳಲ್ಲಿ ತವಕಗೊಳ್ಳಬಹುದು. ಸರ್ಕಾರದವರೇ ಇಂಥ ಕೆಲಸವನ್ನು ಮಾಡಿಸಬಲ್ಲರಲ್ಲದೆ ಪ್ರಜೆಗಳೇ ಸ್ವತಂತ್ರವಾಗಿ ನಡೆಯಿಸಿಕೊಳ್ಳುವುದು ಸುಲಭವಲ್ಲ. ಆದುಕಾರಣ ಈ ಜನಪರಿಗಣನೆತಿಯ ಕಾರ್ಯದಲ್ಲಿ ಸರ್ಕಾರಿ ಪಕ್ಷದ ಇನ್ಯೂಮರೇಟರುಗಳು ಮನೆಮನೆಗೆ ಬಂದು ಅವಶ್ಯಕಗಳಾದ ಯಾವ ಪ್ರಶ್ನೆಗಳನ್ನು ಮಾಡುವರೋ ಅದಕ್ಕೆ ತಕ್ಕ ನಿಜವಾದ ಸ್ಥಿತಿಗತಿಗಳನ್ನು ಉತ್ತರರೂಪವಾಗಿ ತಿಳಿಯಿಸಿ ಪ್ರತಿಯೊಬ್ಬ ಪ್ರಜೆಯೂ ಬರೆಯಿಸುವುದರಲ್ಲಿ ಹಿಂದೆಗೆಯಬಾರದು.

ನಮ್ಮ ದೇಶದಲ್ಲಿ ಈ ಜನಪರಿಗಣನೆತಿಯ ಏರ್ಪಾಟು ಹುಟ್ಟಿ ಇಲ್ಲಿಗೆ ೪೦ ವರ್ಷಗಳು ತುಂಬಿಹೋದುವು. ನಾಲ್ಕುಸಲ ಇಂಥ ಪರಿಗಣನೆತಿಯು ನಡೆದುಹೋಗಿ, ಈಗ ೫ನೆಯ ಸಲದ ಗಣನೆತಿಯು ನಡೆಯುವುದರಲ್ಲಿರುವುದು. ಆದುಕಾರಣ ನಮ್ಮ ದೇಶೀಯರಿಗೆ ಇದು ಹೊಸದಾದ ವಿಷಯವೇನೂ ಅಲ್ಲ.

ಈ ಸಲದ ಲೆಕ್ಕದ ಫಾರಮುಗಳಲ್ಲಿ ಇನ್ಯೂಮರೇಟರುಗಳು ಕೇಳಿ ಭರ್ತಿಮಾಡಬೇಕಾದ ಕಲಮುಗಳು ೧೬ ಇರುತ್ತವೆ. ಇವುಗಳಲ್ಲಿ ೪ನೆ ನಿಬಂಧನೆ ೪ನೆ ಕಲಮ್ಮಿನಲ್ಲಿ ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್, ಜ್ಯೂಕ್, ಪಾರ್ಸಿ ಮೊದಲಾದ ಮತಗಳ ಹೆಸರನ್ನು ಬರೆಯಿಸಬೇಕೆಂದೂ, ೮ನೆ ನಿಬಂಧನೆ ೮ನೆ ಕಲಮ್ಮಿನಲ್ಲಿ ಜಾತಿ ಮತ್ತು ಒಳಭೇದಗಳನ್ನು ಎಂದರೆ ಇದರ (a) ಸಬ್‌ಕಲಮ್ಮಿನಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ನಗರ್ತ, ಲಿಂಗಾಯಿತ, ಒಕ್ಕಲಿಗ, ಪಾಂಚಾಲ, ಇತ್ಯಾದಿಯಾಗಿಯೂ, (b) ಸಬ್‌ಕಲಮ್ಮಿನಲ್ಲಿ ಅವರವರ ಒಳಭೇದಗಳು ಏನನ್ನು ಹೇಳುತ್ತಾರೋ ಅವನ್ನು ಬರೆಯಬೇಕೆಂದು ತಿಳಿಯಿಸಲ್ಪಟ್ಟಿದೆ.

ಇದರ ಮೇಲೆ ಆಕ್ಷೇಪಿಸಿ ಕೆಲಪತ್ರಗಳು ನಮ್ಮಲ್ಲಿಗೆ ಬಂದಿವೆ. ಅವಕ್ಕೆಲ್ಲಾ ಉತ್ತರವಾಗಿ ನಾವು ಈ ಲೇಖನವನ್ನು ಬರೆಯಬೇಕಾಯಿತು.

ವೀರಶೈವರಿಗೆ ಲಿಂಗಧಾರಿಗಳು, ಶಿವಭಕ್ತರು, ಶಿವಾಚಾರದವರು, ವೀರಶೈವರು ಎಂಬ ಹೆಸರುಗಳು ಸಂಪ್ರದಾಯ ಸಿದ್ಧಿಗಳಾದ ಮತದ ಹೆಸರುಗಳು. ಲಿಂಗಾಯತ ಎಂಬುದು ಮಹಮ್ಮದೀಯರ ಪ್ರಭುತ್ವದಲ್ಲಿ ರೂಢಿಗೆ ಬಂದಿರಬೇಕು. ವೀರಶೈವರ ಯಾವ ಪ್ರಾಚೀನ ಗ್ರಂಥದಲ್ಲೂ ಈ ಹೆಸರು ಅವರಿಗೆ ಉಪಯೋಗಿಸಲ್ಪಟ್ಟಿಲ್ಲ. ಅದರ ಮಾತು ಹಾಗಿರಲಿ. ವೀರಶೈವ ಅಥವಾ ಲಿಂಗಧಾರಿಯೆಂದು ಹೇಳಿಸಿಕೊಳ್ಳುವವರೆಲ್ಲಾ ಒಂದು ಮತದವರೇ ಹೊರತು ಒಂದು ಜಾತಿಯವರಲ್ಲ. ವೀರಶೈವವು ಹಿಂದುಗಳಲ್ಲಿ ವೇದಾಗಮ ಸಂಮತವಾದ ಒಂದು ಸ್ವತಂತ್ರಮತವಾಗಿರುತ್ತ, ಇದರಲ್ಲಿ ಬ್ರಾಹ್ಮಣಾದಿ ಚತುರ್ವರ್ಣಗಳೂ ಇರುತ್ತವೆ. ಇದೆಲ್ಲಾ ಒಂದು ಜಾತಿಯಲ್ಲವೆಂಬುದು ಪ್ರತ್ಯಕ್ಷವಾಗಿ ನೋಡುವವರಿಗೆಲ್ಲಾ ಗೊತ್ತಾಗದೆ ಹೋಗುವುದಿಲ್ಲ. ಹೀಗಿರುವಾಗ ಜಾತಿಯ ಕಲಮ್ಮಿನಲ್ಲಿ ಲಿಂಗಾಯತ ಎಂಬ ಒಂದು ಹೆಸರನ್ನೇ ಬರೆಯಿಸಬೇಕೆಂದು ಸರ್ಕಾರದವರು ತಿಳಿವಿಕೆ ಕೊಟ್ಟಿರುವುದು ತಪ್ಪಾಗಿರುತ್ತದೆ. ಇದೇ ತೆರದ ಏರ್ಪಾಟು ಕಳೆದ ೧೯೦೧ನೆ ವರ್ಷದ ಜನಪರಿಗಣನೆತಿಯ ಕಾಲದಲ್ಲೂ ಮಾಡಲ್ಪಟ್ಟಿದ್ದುದರ ಮೇಲೆ ಮತದಜನರು ಸರ್ಕಾರಕ್ಕೆ ಬಿನ್ನೈಸಿಕೊಳ್ಳಲು, ಆದನ್ನು ಗೌರ್ನಮೆಂಟಿನವರು ವಿಚಾರಮಾಡಿ, ಯುಕ್ತವೆಂದು ಅಂಗೀಕರಿಸಿ, ಈ ಕೆಳಗೆ ಕಾಣಿಸಿರುವ ಆಪ್ಪಣೆಯನ್ನು ಕೊಟ್ಟರು:—

PROCEEDINGS OF THE GOVERNMENT OF H. H. THE MAHARAJA OF MYSORE.
No. Fb. 3961 Census 31-10 Dated 25th January 1911.

Government consider that there is no objection to allowing the Lingayets to return themselves as Hindus by religion in col. 3 of the schedule and Lingadhari or Veerasaiva Brahmin, Lingadhari or Veerasaiva Kshatria etc, as the case may be by caste in col. 7 *(a)* provided they give the names of the sub-castes as ordinarily known such as Aradhya, Gurusthala, Punchachara Gowda etc. for entry in col. 7 (*b*), provided for the purpose and provided also that such answers are "to the best of the knowledge or belief" (Sec. 7 of the Census Regulation) of the person giving the answers.

ಇದರ ಅಭಿಪ್ರಾಯವೇನೆಂದರೆ-ಲಿಂಗಾಯತರು ಷೆಡ್ಯೂಲಿನ ೩ನೆ ಕಲಮ್ಮಿನಲ್ಲಿ ಹಿಂದೂಮತದವರೆಂದೂ, (a) ಕಲಮ್ಮಿನಲ್ಲಿ ಲಿಂಗಧಾರಿ ಅಥವಾ ವೀರಶೈವಬ್ರಾಹ್ಮಣ, ಲಿಂಗಧಾರಿ, ಅಥವಾ ವೀರಶೈವಕ್ಷತ್ರಿಯ ಇತ್ಯಾದಿ ಜಾತಿಯವರೆಂದೂ, (b) ಕಲಮ್ಮಿನಲ್ಲಿ ಸಾಧಾರಣವಾಗಿ ಪ್ರಚಾರದಲ್ಲಿರುವ ಆರಾಧ್ಯ, ಗುರುಸ್ಥಲ, ಪಂಚಾಚಾರಗೌಡ, ಎಂಬುದು ಮೊದಲಾದ ಒಳಭೇದದವರೆಂದೂ ಬರೆಯಿಸುವುದರಲ್ಲಿ ಸರ್ಕಾರದವರ ಆಕ್ಷೇಪವೇನೂ ಇಲ್ಲ'' ಎಂಬುದಾಗಿದೆ. ಈ ಪ್ರೊಸೀಡಿಂಗ್ಸಿನಂತೆ ಈ ಸಲವೂ ಸೆನ್ಸಸ್ ಸೂಪರಿಂಟೆಂಡೆಂಟರು ಪ್ರಕಟಿಸಿ, ಕಲಂ ೪ರಲ್ಲಿ ಹಿಂದೂಮತದವರೆಂದೂ, ಕಲಂ ೮ನೆ (a) ಸಬ್‌ಕಲಮ್ಮಿನಲ್ಲಿ ಲಿಂಗಧಾರಿ ಬ್ರಾಹ್ಮಣ, ಲಿಂಗಧಾರಿ ಕ್ಷತ್ರಿಯಾದಿ ನಾಮಗಳನ್ನೂ, (b) ಸಬ್‌ಕಲಮ್ಮಿನಲ್ಲಿ ಅವರವರ ಒಳಬೆಡಗುಗಳ ಹೆಸರನ್ನೂ ಕೇಳಿ ಬರೆದುಕೊಳ್ಳಬಹುದೆಂದು ಇನ್ಯೂಮರೇಟರಿಗೆ ತಿಳಿವಿಕೆ ಕೊಡಬಹುದಾಗಿದೆ. ಮತ್ತು ವೀರಶೈವ ಪ್ರಜೆಗಳೂ ಸಹ ಈ ಪ್ರೊಸೀಡಿಂಗ್ಸಿನ ಆಧಾರವನ್ನುತೋರಿಸಿ, ಸೂಪರಿಂಟೆಂಡೆಂಟರಿಗೆ ವಿಜ್ಞಾಪ್ತಿಸಿಕೊಂಡು ತಮ್ಮ ಮತ ಜಾತಿಗಳ ಮತ್ತು ಒಳಭೇದಗಳ ಹೆಸರುಗಳನ್ನು ಬರೆಯಿಸಿಕೊಳ್ಳುವಲ್ಲಿ ಸಂಶಯಪಡಬೇಕಾದುದಿಲ್ಲ.

ಒಳದೇಶದ ವೃತ್ತಾಂತಗಳು.

ತಾ|| ೧೯ರಲ್ಲಿ ಶ್ರೀಮದ್ ಮಹಾರಾಜರವರು ಗೋಪಾಲಸ್ವಾಮಿ ಬೆಟ್ಟಕ್ಕೆ ಹೋಗಿದ್ದು ಬಂದರು.

ದಿವಾನರು ಕಳೆದ ತಾ|| ೧೭ರಲ್ಲಿ ತುಮಕೂರು ಚಿತ್ರದುರ್ಗ ಡಿಸ್ಪೆನ್ಸರಿಗಳ ಸಂಚಾರಕ್ಕಾಗಿ ಬೆಂಗಳೂರಿಂದ ದಯಮಾಡಿಸಿರುವರು.

ಮೂರನೆ ಕೌನ್ಸಿಲರಾದ ಮಿ|| ವಿಾರ್ ಹಂಚಾಹುಸೇನ್ ಸಾಹೇಬರವರು ಶಿವಮೊಗ್ಗಾ, ಕಡೂರು, ಹಾಸನ ಡಿಸ್ಪೆನ್ಸರಿಗಳಿಗೆ ಸಂಚಾರಕ್ಕೆ ತೆರಳುವರು.

ವಿದ್ಯಾಭ್ಯಾಸ ಶಾಖಾಧ್ಯಕ್ಷರಾಗಿರುವ ಮಿ|| ರಾಮಲಿಂಗರೆಡ್ಡಿ ಎಂ. ಎ. ಯವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೇಜ್ ರಜವು ಈ ತಿಂಗಳ ಕಡೆಯವರೆಗೂ ಹೆಚ್ಚಿಸಲ್ಪಟ್ಟಿದೆ.

ಸರ್ ಎಂ. ವಿಶ್ವೇಶ್ವರಯ್ಯನವರು ಬೆಂಗಳೂರಿಂದ ಬೊಂಬಾಯಿಗೆ ದಯಮಾಡಿಸಿದರು. ಇನ್ನು ಕೆಲವು ತಿಂಗಳುಗಳವರೆಗೆ ಅವರು ಅಲ್ಲೇ ಇರುವರೆಂದು ಕೇಳುತ್ತೇವೆ.

ರಜಾದಮೇಲೆ ಹೋಗಿದ್ದ ಮಿ|| ಸಿ. ಎಫ್. ಬೌರಿಂಗ್ ಸಾಹೇಬರು ತಾ|| ೨೧ರಲ್ಲಿ ಮೈಸೂರು ಡೆ|| ಕಮಿಷನರುದ್ಯೋಗವನ್ನು ಮಿ|| ಆರ್. ನಾನಾಸಾಮಿರಾಯರಿಂದ ವಹಿಸಿಕೊಂಡರು.

ನಂಜನಗೂಡಿನಲ್ಲಿ ನಡೀತೀಪದಲ್ಲಿರುವ ಲಿಂಗಾಭಟ್ಟರ ಗುಡಿಯ ಬಳಿಯಣ ತೋಪಿನಲ್ಲಿ ಇಂದಿನಿಂದ ಪ್ರತಿಭಾನುವಾರವೂ ಸಂತೆ ಕೂಡುವಂತೆ ಆಲ್ಲಿಯ ಮ್ಯುನ್ಸಿಪಾಲಿಟಿಯವರು ಏರ್ಪಡಿಸಿರುತ್ತಾರೆ.

ಕರ್ನಲ್ ದೇಶರಾಜ ಅರಸರವರ ಕುಮಾರರಾದ ರಾಜಕುಮಾರ ಸಿ. ದೇಶರಾಜೇ ಅರಸಿನವರು ನಮ್ಮ ದೇಶದ ಇಂಪೀರಿಯಲ್ ಲ್ಯಾಕ್ಸರ್ಸ್ ಸೈನ್ಯದ ಆನರೆರಿ ಲೆಫ್ಟಿನೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಮಹಾರಾಜಾ ಬಟ್ಟೆಯ ಕಾರ್ಯಾಲಯದ ೧೫೦೦ ಕೂಲಿಕಾರರು ಕೂಲಿಯನ್ನು ಹೆಚ್ಚಿಸಿದ ಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದು ನಿಂತುಬಿಟ್ಟಿದ್ದಾರೆ.

ಬಳಗೊಳದ ಮಾರ್ಗದ ಪಕ್ಕದಲ್ಲಿ ದ್ವಿತೀಯ ರಾಜಕುಮಾರಿಯವರ ಹೆಸರಿನ ಮೇಲೆ ಕಟ್ಟಲ್ಪಟ್ಟಿರುವ ಕ್ಷಯರೋಗದ ವೈದ್ಯಾಲಯದಲ್ಲಿ ಬರುವ ಮಾರ್ಚಿ ತಿಂಗಳಿಂದ ಚಿಕಿತ್ಸಾರಂಭವಾಗುವುದೆಂದು ತಿಳಿಯುತ್ತೇವೆ.

ಈ ಸಲದ ಚುಂಚನಕಟ್ಟೆ ಜಾತ್ರೆಗೆ ಪದ್ಧತಿಯಂತೆ ದನಗಳು ವಿಶೇಷವಾಗಿಯೇ ಬಂದಿದ್ದುವು. ಆದರೆ ಉತ್ತರದೇಶದ ಗಿರಾಕಿಗಳು ಹೆಚ್ಚಾಗಿ ಬರಲಿಲ್ಲವೆಂದೂ, ದನದ ಬೆಲೆಯು ಹೆಚ್ಚಿರಲಿಲ್ಲವೆಂದೂ ಕೇಳಿದೆವು.

ಚೀಫ್ ಸೆಕ್ರಟೆರಿ ಮಿ|| ಬಾಲಸುಂದರಂ ಆಯ್ಯರ್‌ರವರು ಈ ತಾ|| ೨೪ರಿಂದ ೩ ತಿಂಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಮಿ|| ಕೆ. ಮೆಥಾನ್‌ರವರು ಮಿ|| ಆಯ್ಯರ್‌ರವರು ಬರುವವರೆಗೆ ಚೀಫ್ ಸೆಕ್ರಟೆರಿಯವರಾಗಿರುವರೆಂದು ವದಂತಿಯಿದೆ.

ಬ್ರಿಟಿಷ್ ರೆಸಿಡೆಂಟರು ನಿನ್ನೆಸಲ ಕೊಡಗಿಗೆ ದಯಮಾಡಿಸಿದ್ದಾಗ್ಗೆ ತಮ್ಮನ್ನು ಕಾಣುವುದಕ್ಕೆ ಬಂದಿದ್ದ ಆಲ್ಲಿಯ ಪ್ರಮುಖರೊಡನೆ ನಿಮ್ಮ ಸೀಮೆಗೆ ಒಂದು ಪ್ರತ್ಯೇಕ ಶಾಸನ ನಿರ್ಮಾಣ ಸಭೆಯನ್ನು ಕೊಡಲು ಆಪ್ಪಣೆಯಾಗಿದೆಯೆಂದೂ ಅದರಲ್ಲಿ ಪ್ರಜಾನಿಯುಕ್ತ ಸಭಿಕರ ಸಂಖ್ಯೆಯೇ ಹೆಚ್ಚಾಗಿರುವುದೆಂದೂ ತಿಳಿಯಿಸಿರುವರೆಂದು ಆರಿಯುತ್ತೇವೆ.

ಧಾರವಾಡದಿಂದ ಹೊರಡುತ್ತಿದ್ದ ಶುಭೋದಯವೆಂಬ ವಾರಪತ್ರಿಕೆಯ ಸಂಪಾದಕರಾಗಿದ್ದ ಮಿ|| ವಾಸುದೇವಾಚಾರ್ಯ ಕೆರೂರು ಎಂಬುವರು ಮಧುಮೇಹರೋಗದಿಂದ ರಾಜಪ್ರಣವನ್ನು ಹೊಂದಿದ್ದು ಕಳೆದ ತಾ|| ೧೧ರಲ್ಲಿ ಬಾಗಲಕೋಟೆಯಲ್ಲಿ ವೈಕುಂಠವಾಸಿಗಳಾದರೆಂದು ಕೇಳುತ್ತೇವೆ. ಇವರ ವಿಷಯವು ನಮ್ಮ ಪತ್ರಿಕಾ ವಾಚಕರಿಗೆಲ್ಲಾ ಗೊತ್ತೇ ಇದೆ.

ರಾಜಧಾನಿಯ ವಿದ್ಯಾರ್ಥಿಗಳಲ್ಲಿ ೧೫೦ ಜನರಿಗೆ ಮೇಲ್ಪಟ್ಟು ಕಳೆದ ತಾ|| ೧೪ರ ಸಾಯಂಕಾಲ ಚಾಮುಂಡಿ ರೇಸ್‌ಕೋರ್ಸ್‌ನಲ್ಲಿ ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ತಮ್ಮ ವಿದ್ಯಾವ್ಯಾಸಂಗ ಮೊದಲಾದುದರಲ್ಲಿರುವ ಕೊರತೆಯ ಭಾಗಗಳನ್ನು ಬಿನ್ನೈಸಿಕೊಂಡುದರ ಮೇಲೆ ವಿಚಾರಿಸುವುದಾಗಿ ಮಹಾರಾಜರವರು ಆಪ್ಪಣೆ ಕೊಡಿಸಿದರೆಂದು ತಿಳಿಯುಬರುತ್ತದೆ.

ನಾಗಪುರದಲ್ಲಿ ಕೂಡಿದ್ದ ನ್ಯಾಷನಲ್ ಕಾಂಗ್ರೆಸ್ಸಿಗೆ ದ್ವಾರಕೆಯ ಶಾರದಾಪೀಠದ ಸ್ವಾಮಿಗಳು ಹೋಗಿದ್ದರು. ಆವರು ಮೈಸೂರಿನ ಶೃಂಗೇರಿ ಶಾರದಾ ಪೀಠಕ್ಕೆ ಸ್ವಾಮಿಗಳನ್ನು ಏರ್ಪಡಿಸಲಿಕ್ಕೆ ಮೈಸೂರು ಪ್ರಭುತ್ವದವರಿಗಿದ್ದ ಸ್ವಾತಂತ್ರ್ಯಕ್ಕೆ ಇಂಡ್ಯಾ ಗೌರ್ನಮೆಂಟಿನವರು ತಡೆಯನ್ನು ಮಾಡಿದ್ದರೆಂದು ಉಪನ್ಯಾಸಮಾಡಿದ್ದರು. ಇದು ಸುಳ್ಳೆಂದು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ

ಈ ಕೆಳಗೆ ಕಂಡಂತೆ ಪೊಲೀಸ್ ಸೂಪರಿಂಟೆಂಡೆಂಟರುಗಳ ವರ್ಗಾವರ್ಗಿಯಾಗಿದೆ ಮಿ|| ಗಳಾದ ಸಿ. ಮಾಚಯ್ಯನವರು ಮೈಸೂರು ಡಿಸ್ಟ್ರಿಕ್ಟ್‌ನಿಂದ ಬೆಂಗಳೂರು ಡಿಸ್ಟ್ರಿಕ್ಟ್‌ಗೆ. ಶ್ರೀನರಸಿಹ್ಮಶಾಸ್ತ್ರಿಗಳು ತುಮಕೂರು ಡಿಸ್ಟ್ರಿಕ್ಟ್‌ನಿಂದ ಮೈಸೂರು ಡಿಸ್ಟ್ರಿಕ್ಟ್‌ಗೆ. ಟಿ ಅಬ್ದುಲ್‌ಖಾದರ್‌ರವರು ಬೆಂಗಳೂರು ಡಿಸ್ಟ್ರಿಕ್ಟ್‌ನಿಂದ ತುಮಕೂರು ಡಿಸ್ಟ್ರಿಕ್ಟ್‌ಗೆ.

ಚಿಳ್ಳಕೆರೆಯಲ್ಲಿರುವ ವೀರಶೈವ ಶ್ರೀಮಂತರಾದ ಮಿ|| ನಿಸ್ವಿವಾಳದ ಶಿವಪ್ಪನವರು ವೀರಶೈವ ವಿದ್ಯಾರ್ಥಿಗಳಿಗೆ ಛಾತ್ರನವನ್ನೂ ಆಶನಾನುಕೂಲವನ್ನೂ ಪ್ರತಿಷ್ಠಿಸುವುದಕ್ಕಾಗಿ ೨೫ ಸಾವಿರ ರೂಪಾಯಿಗಳನ್ನು ವಾಗ್ದಾನ ಮಾಡಿರುವರೆಂಬುದನ್ನು ಕೇಳಿ ಅವರ ಔದಾರ್ಯಕ್ಕೂ ಮತಾಭಿಮಾನಕ್ಕೂ ಧನ್ಯವಾದವನ್ನು ಮಾಡುವುದಲ್ಲದೆ ಜಗದೀಶ್ವರನು ಅವರಿಗೆ ಇನ್ನೂ ಉತ್ತರೋತ್ತರ ಶ್ರೇಯಸ್ಸನ್ನುಂಟುಮಾಡಲೆಂದು ಕೋರುತ್ತೇವೆ.

ರಾ|| ಬ|| ಆಣ್ಣಾಮಲೆ ಚಟ್ಟಿಯಾರ್ ಎಂಬುವರು ದಿಲ್ಲಿಯಲ್ಲಿ ಮುಂದಣ ತಿಂಗಳೊಳಗೆ ಕೂಡಲಿಕ್ಕಿರುವ ಸ್ಪೆಷ್‌ಕ್ರಾಸಿಲಿನಲ್ಲಿ ಕೆಲವು ತೀರ್ಮಾನಗಳನ್ನು ಚರ್ಚೆಗೆ ತರುವುದರಲ್ಲಿದ್ದಾರೆ. ಆದರೊಳಗೆ ಮೈಸೂರು ಕೃಷ್ಣರಾಜಸಾಗರದ ವಿಷಯದಲ್ಲಿ ತಂಜಾವೂರು ತಿರುಚನಾಪಲ್ಲಿಗಳಲ್ಲಿರುವ ಭೂಸ್ವಾಮಿಗಳ ಪ್ರತಿನಿಧಿಗಳಿಗೆ ಸಂಗತಿಸಂದರ್ಭಗಳೊಂದನ್ನೂ ತಿಳಿಯಪಡಿಸದೆ ಯಾವ ನಿರ್ಧಾರವನ್ನೂ ಕೊನೆ ಮುಟ್ಟಿಸಕೂಡದು ಎಂದು ವೈಸ್ರಾಯರಿಗೆ ಶ್ರುತಪಡಿಸುವ ವಿಷಯವೂ ಒಂದಾಗಿರುತ್ತದೆ.

ಚೀನಿ ಪಾತ್ರೆಗಳನ್ನೂ ಪೈಪುಗಳನ್ನೂ ಮಾಡುವುದಕ್ಕೆ ಅನುಕೂಲಿಸುವುದೆಂದು ಶಾಸ್ತ್ರಜ್ಞರಿಂದ ಗೊತ್ತುಮಾಡಲ್ಪಟ್ಟಿರುವ ಜೇಡಿಮಣ್ಣುಳ್ಳ ಪ್ರದೇಶವು ಬೆಂಗಳೂರಿಗೆ ಸಮೀಪದಲ್ಲಿದೆಯಂತೆ. ಖಾಸಗಿ ಜನರೇ ಆಗಲಿ ಆಥವಾ ಮೈಸೂರು ದೇಶೀಯರಿಂದ ಷೇರುಗಳಿಂದಲೇ ನಿರ್ಮಿಸಲ್ಪಡುವ ಜಾಯಿಂಟ್ ಸ್ಟಾಕ್ ಕಂಪೆನಿಯವರೇ ಆಗಲಿ ಇದರ ಕೈಗಾರಿಕೆಯನ್ನು ಈ ಸಂಸ್ಥಾನದಲ್ಲಿ ನಡೆಯಿಸಲು ಪ್ರಯತ್ನಿಸಿದರೆ ಆಂಥವರಿಗೆ ೫ ವರ್ಷಗಳ ವರೆಗೆ ರಾಜಾದಾಯವನ್ನು ಕೋರದೆ ಉಚಿತವಾಗಿ ಜೇಡಿಮಣ್ಣನ್ನು ತೆಗೆದುಕೊಳ್ಳಲು ಸಂಪೂರ್ಣಾಧಿಕಾರವನ್ನು ಕೊಡುವವರಾಗಿದ್ದಾರೆ. ಇಷ್ಟವುಳ್ಳವರು ಸಂಸ್ಥಾನದ ಕೈಗಾರಿಕೆ ಮತ್ತು ವ್ಯಾಪಾರ ಶಾಖೆಯ ಡೈರೆಕ್ಟರಿಗೆ ಫಿಬ್ರವರಿ ತಿಂಗಳ ಕಡೆಯೊಳಗಾಗಿ ಬರೆದುಕೊಳ್ಳಬಹುದು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾದ ಪುಡ್ಡೂರಿನ ಮಿ|| ಎಂ. ಸಿ. ಲಿಂಗೇಗೌಡರು ಮಳವಳ್ಳಿಯ ಎಂ. ಚಿನ್ನಪ್ಪನವರು ಮತ್ತು ಕೆಲ ದೊಡ್ಡ ಮನುಷ್ಯರುಗಳು ಕೊಳ್ಳೇಗಾಲದ ಕೆಲ ದೊಡ್ಡ ಮನುಷ್ಯರುಗಳ ಸಹಕಾರದಿಂದ ದೊಡ್ಡ ಬಂಡವಾಳವನ್ನು ಹಾಕಿ ಮದ್ದೂರಿನಿಂದ ಕೊಳ್ಳೇಗಾಲಕ್ಕೂ ಅಲ್ಲಿಂದಿಲ್ಲಿಗೂ ಪ್ರಯಾಣಿಕರು ಹೋಗಿಬರಲನುಕೂಲಿಸುವಂತೆ ಈಗ ೬-೭ ತಿಂಗಳಿಂದಲೂ ೩-೪ ಬಂಡಿಗಳನ್ನಿಟ್ಟು ನಡೆಸುತ್ತಿರುವರು. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗಿರುತ್ತದೆಂದು ನಾವು ಕೇಳಿರುತ್ತೇವೆ. ಆದರೆ ಯಾರಾದರೂ ನೂತನವಾಗಿ ಯಾವುದಾದರೂ ಒಂದು ಕಾರ್ಯವನ್ನು ಮಾಡಿದರೆ ನೋಡಿ ಸಹಿಸದಂತಹ ಕೆಲ ಜನರು ಈಗ ಮೋಟಾರನ್ನು ನಡೆಯಿಸುತ್ತಿರುವವರ ಮೇಲಣ ಸ್ಪರ್ಧೆಯಿಂದ ಮತ್ತೊಂದು ಕಂಪೆನಿಯನ್ನೇ ಪರ್ಡಿಸಿ ಆಗಳೇ ಬಂಡಿಯನ್ನು ತರಿಸಿ ಮೈಸೂರು ಮತ್ತು ಕೊಯಮತ್ತೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳ ಲೈಸೆನ್ಸನ್ನು ಕೇಳುವಲ್ಲಿ ಒಂದೇಕಡೆ ಎರಡು ಮೂರು ಕಂಪೆನಿಗಳಿಗೆ ಅವಕಾಶ ಕೊಡಲು ಮಾರ್ಗದ ಅನುಕೂಲತೆಯು ಕಡಿಮೆಯೆಂದು ಉಭಯ ಡಿ|| ಮ್ಯಾಜಿಸ್ಟ್ರೇಟರುಗಳೂ ಲೈಸೆನ್ಸ್ ಕೊಡಲು ತಿರಸ್ಕರಿಸಿದ್ದು ದಾಗಿಯೂ ಈಗ ಪುನಃ ಲೈಸೆನ್ಸನ್ನು ಪಡೆಯಲು ಪ್ರಯತ್ನಪಡುತ್ತಲಿರುವುದಾಗಿಯೂ ತಿಳಿಯುತ್ತೇವೆ. ಹಿಂದೆ ಹೀಗೆಯೇ ರಾಜಧಾನಿಯಿಂದ ಹುಣಸೂರಿಗೆ ಒಬ್ಬರ

ಭರತಖಂಡದ ವೃತ್ತಾಂತಗಳು.

ಕೈ॥ ಬಾಲಗಂಗಾಧರ ತಿಲಕರ ಶಿಲಾ ವಿಗ್ರಹವನ್ನು ತಮ್ಮ ಪಟ್ಟಣದಲ್ಲಿ ಸ್ಥಾಪಿಸಬೇಕೆಂದು ಅಹಮ್ಮದಾಬಾದ್ ಮ್ಯುನಿಸಿಪಾಲಿಟಿಯವರು ನಿರ್ಧರಿಸಿದ್ದಾರೆ.

ಬೊಂಬಾಯಿ ಪೇಟೆಯಲ್ಲಿ ಈಗ ಹತ್ತಿಯ ಬೆಲೆಯು ಸ್ವಲ್ಪ ಏರುತ್ತಲಿದೆ. ಬ್ರೋಚಹತ್ತಿ ಏಪ್ರಿಲ್ ಮೇ ತಿಂಗಳ ವಾಯಿದೆಗೆ ೩೪೩ ರೂ. ನಂತೆ ಕಳೆದವಾರದಲ್ಲಿದ್ದಿತು.

ದಿಲ್ಲಿಯಲ್ಲಿ ಬರುವ ಫಿಬ್ರವರಿ ತಾ॥ ೯ ರಲ್ಲಿ ಕನ್ನಾಟ್ ಪ್ರಭುಗಳು ಸ್ಟೇಟ್ ಕೌನ್ಸಿಲನ್ನೂ ಸಾಮ್ರಾಜ್ಯ ಶಾಸನ ಸಭೆಯನ್ನೂ ಪ್ರಾರಂಭಿಸುತ್ತಾರೆ. ಆ ದಿನ ಊರಿನವರೆಲ್ಲಾ ಪೂರ್ಣವಾಗಿ ಹರಿತಾಳವನ್ನಾಚರಿಸಿ ಅಂಗಡಿಗಳನ್ನೆಲ್ಲಾ ಮುಚ್ಚಿ ಬಿಡಬೇಕೆಂದು ಅಲ್ಲಿಯ ರಾಷ್ಟ್ರೀಯ ಕಾಂಗ್ರೆಸ್ ಸಂಘದವರು ತೀರ್ಮಾನಿಸಿರುವರು.

ಬೊಂಬಾಯಿ ಪಟ್ಟಣದಲ್ಲಿ ಒಂದು ಹೈನದ ಮನೆಯನ್ನು ಸ್ಥಾಪಿಸಿ ಶುದ್ಧವಾದ ಹಾಲನ್ನು ಪ್ರಜೆಗಳಿಗೆ ಮಾರಾಟಮಾಡಬೇಕೆಂಬ ಉದ್ದೇಶದಿಂದ ಒಂದು ದೊಡ್ಡ ಪ್ರಯತ್ನವು ನಡೆದಿದೆ. ೧ ಕೋಟಿ ರೂ. ಗಳ ಮೂಲಧನವುಳ್ಳ ಸಂಘವನ್ನು ಸ್ಥಾಪಿಸಿ, ೫೦ ಸಾವಿರ ಹಸುಗಳನ್ನು ಸಾಕುವರು. ಅನೇಕ ಮಂದಿ ದೊಡ್ಡ ವರ್ತಕರು ಇದರಲ್ಲಿ ಸೇರಿದ್ದಾರೆ.

ನೂತನ ಮದ್ರಾಸು ಶಾಸನ ಸಭೆಗೆ ಸಭಿಕರಾಗಿ ಆರಿಸಿಬಂದ ಇಬ್ಬರು ಮಹಮ್ಮದೀಯರನ್ನು ಧಿಕ್ಕರಿಸಿದ ಕರಪತ್ರಗಳನ್ನು ತಲಚೇರಿಯ ಇಬ್ಬರು ಕೆಲಾಪತ್ ಸಂಘ ಸಭಿಕರು ಪ್ರಕಟಿಸಿದುದಕ್ಕಾಗಿ ತಲಾ ೫೦ ರೂ. ಗಳ ಅರ್ಥದಂಡವೂ, ಆಚ್ಚು ಕೂಟದ ಹೆಸರನ್ನು ಹಾಕದೆ ಅದನ್ನು ಮುದ್ರಿಸಿಕೊಟ್ಟ ಮುದ್ರಣಾಲಯದ ಯಜಮಾನರ ಮಗನಿಗೆ ೧೦ ರೂ. ದಂಡವೂ ವಿಧಿಸಲ್ಪಟ್ಟಿತು.

ಆಸ್ಸಾಮಿನ ಟೀತೋಟಗಳಿಗೆ ಸೇರಿದ ಸಿ. ಎಂ. ವರ್ಚಸ್ ಎಂಬ ಆಂಗ್ಲೇಯನು ಮದ್ರಾಸಿನ ಪಿ. ಆರ್. ಅಂಡ್ ಸನ್ಸ್‌ರವರಿಂದ ವಜ್ರಗಳ ಮೂರು ಉಂಗುರಗಳನ್ನು ಆಂಚೆಯ ಮೂಲಕ ತರಿಸಿಕೊಂಡು, ಪೋಸ್ಟ್‌ಮ್ಯಾನನನ್ನು ಬೆದರಿಸಿ, ಆ ಪಾರ್ಸಲನ್ನು ವಶಪಡಿಸಿಕೊಂಡು ಬಳಿಕ ಆ ಬಾಬಿಗಿಯ ವಿಷಯವು ತನಗೆ ತಿಳಿಯದೆಂದು ಹೇಳಿದನು. ಪೋಲೀಸರು ಅವನ ಮನೆಯನ್ನು ಪರಿಶೋಧಿಸಿ ಉಂಗುರಗಳನ್ನು ಪತ್ತೆಮಾಡಿದರು. ದಂಡಾಧಿಕಾರಿಯು ಆತನಿಗೆ ೧ ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ರಾಯಬರೇಲಿ ಜಿಲ್ಲೆಯ ಕೆಲಗ್ರಾಮಗಳಲ್ಲಿ ಭೂಸ್ವಾಮಿಗಳಿಗೂ ರೈತರಿಗೂ ಮನಸ್ತಾಪವಿದ್ದಿತು. ಕಳೆದ ತಾ॥ ೪ ರಲ್ಲಿ ಪರ್ಚಟ್ ಗಂಜ್ ಎಂಬಲ್ಲಿ ೨೦೦೦ ಮಂದಿ ರೈತರು ಸರ್ದಾರ್ ನಿಹಲ್‌ಸಿಂಗ್‌ರವರ ಮನೆಯ ಸುತ್ತಲೂ ಮುತ್ತಿದರು. ಸಾಯುಧ ರಾದ ಪೋಲೀಸರು ಅಲ್ಲಿಗೆ ಬಂದರು. ಆವರ ಮೇಲೆ ಗುಂಪಿನವರು ಕಲ್ಲುಗಳನ್ನು ಬೀರಿದರು. ಮತ್ತು ಗುಂಪಿನವರು ಪೇಟೆಗಳಲ್ಲಿನ ಅಂಗಡಿಗಳನ್ನು ಸೂರೆಮಾಡಲುಪಕ್ರಮಿಸಿದರು. ಕೆಲವು ಅಂಗಡಿಗಳೂ ಮನೆಗಳೂ ದೋಚಲ್ಪಟ್ಟುವು. ಪೋಲೀಸರು ತುಪಾಕಿಗಳನ್ನು ಹಾರಿಸಿದುದರಿಂದ ಇಬ್ಬರು ಸತ್ತರು, ನಾಲ್ವರಿಗೆ ಗಾಯಗಳಾದುವು. ತಾ॥ ೬ ರಲ್ಲಿ ಮುನ್ಸಿಗಂಜ್ ಕಾರಾಗೃಹದ ಇದಿರಿಗೆ ೨೦೦೦ ಮಂದಿಗಳು ಗುಂಪುಕೂಡಿದರು. ಪೋಲೀಸರು ಕುದುರೆಗಳನ್ನೇರಿ ಬಂದರು. ಅವರ ಮೇಲೆ ಕಲ್ಲುಗಳನ್ನು ಬೀರಿದರು. ಪೋಲೀಸರು ತುಪಾಕಿಗಳನ್ನು ಹಾರಿಸಿದರು. ಮೂವರು ಸತ್ತರು, ೫ ಮಂದಿಗೆ ಗಾಯಗಳಾದವು. ಒಟ್ಟು ಈ ಗದ್ದಲದಲ್ಲೆಲ್ಲಾ ೯ ಮಂದಿ ಸತ್ತರೆಂದೂ ೧೨ ಮಂದಿಗಳಿಗೆ ಗಾಯಗಳಾಯವೆಂದೂ ಸರ್ಕಾರದವರು ಪ್ರಕಟಿಸಿದ್ದಾರೆ.

ಮುಂದಣ ನಮ್ಮ ವೈಸ್ರಾಯಿ ಮತ್ತು ಗೌರ್ನರ್ ಜನರಲ್ಲಾಗಿ ಬರುವ ರೀಡಿಂಗ್ ಪ್ರಭುಗಳಿಗೆ ಸೀಮೆಯಲ್ಲಿನ ಹೈಕೋರ್ಟು ನ್ಯಾಯವಾದಿಗಳೆಲ್ಲರೂ ಕಳೆದ ತಾ॥ ೧೧ ರಲ್ಲಿ ಒಂದು ಔತನವನ್ನು ಮಾಡಿದಾಗ ಆವರುಗಳು ಮಾಡಿದ ಅಭಿನಂದನ ಭಾಷಣಗೆ ಲಾರ್ಡ್ ರೀಡಿಂಗ್‌ರವರು ಹೀಗೆ ಉತ್ತರ ಕೊಟ್ಟಿರುವರು—"ನನ್ನನ್ನು ಇಂಡ್ಯಾ ವೈಸ್ರಾಯಿಯನ್ನಾಗಿ ಆರಿಸಿದುದಕ್ಕೆ ಏನು ಕಾರಣವೆಂಬುದನ್ನು ಊಹಿಸಲು ನಾನು ಪ್ರಯತ್ನಿಸುವುದಿಲ್ಲ. ಆ ದೇಶದ ವಿಷಯವಾಗಿ ನನಗೆ ಹೆಚ್ಚಾಗಿ ಏನೂ ತಿಳಿಯದು. ನಾನು ಈಗ ನ್ಯಾಯಮೂರ್ತಿ ಪದವಿಯನ್ನು ಬಿಟ್ಟು ತೆರಳುತ್ತೇನೆ. ಆದರೆ ಇದರಿಂದ ನ್ಯಾಯವಿಚಾರಣ ಕಾರ್ಯವನ್ನು ನಾನು ಬಿಟ್ಟುಬಿಡುತ್ತೇನೆಂದು ಹೇಳಲಾರೆನು. ಇಲ್ಲಿಗಿಂತಲೂ ವಿಸ್ತಾರವಾದ ಪ್ರದೇಶದಲ್ಲಿ ನ್ಯಾಯಸಂಸ್ಥಾಪನ ಮಾಡುವ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ಕೋರ್ಟುಗಳಲ್ಲಿ ನ್ಯಾಯಮೂರ್ತಿಗಳು ತಮ್ಮ ಇದಿರಿಗೆ ರುಜುವಾತಾದ ಸಂಗತಿಗಳನ್ನು ಅನುಸರಿಸಿ ಕೆಲಸ ಮಾಡಬೇಕಾಗುವುದು. ರಾಜಕೀಯ ವಿಷಯದಲ್ಲಿ ಹಾಗಲ್ಲ. ನ್ಯಾಯಕರ್ತನು ನ್ಯಾಯಪರಿಷ್ಕರಣಕ್ಕೆ ಬೇಕಾದ ಸಂಗತಿಗಳನ್ನೆಲ್ಲಾ ತಾನೇ ಸಂಗ್ರಹಿಸುವುದು ಕಷ್ಟತರವಾಗಿರುವುದು. ರಾಜಕೀಯ ವಿಷಯದಲ್ಲಿ ಯಾವುದೋ ಒಂದು ಪರಿಷ್ಕಾರವನ್ನು ಮಾಡಿದ ಬಳಿಕ ಬಹುಕಾಲದ ಮೇಲೆ ಒಳಆಂಶಗಳೆಲ್ಲಾ ಹೊರಬೀಳುವುವು. ಭರತಖಂಡದಲ್ಲಿ ನ್ಯಾಯಸಂಸ್ಥಾಪನೆಯನ್ನು ಮಾಡಬೇಕೆಂಬ ಮುಖ್ಯೋದ್ದೇಶದಿಂದಲೇ ನಾನು ಈ ಉದ್ಯೋಗವನ್ನು ವಹಿಸಲು ಒಪ್ಪಿದೆನು. ಆ ನ್ಯಾಯಸಂಸ್ಥಾಪನೆಯಲ್ಲಿ ಎಂದಿಗೂ ಪರಾಜಿತನಾಗುವುದಿಲ್ಲವೆಂದು ನನಗೆ ನಂಬುಗೆಯಿದೆ" ಎಂದು ಹೇಳಿದ್ದಾರೆ. ಇವರ ಉದ್ದೇಶವು ಭರತಖಂಡದಲ್ಲಿ ಸಫಲವಾಗಲೆಂಬುದೇ ಭಾರತೀಯರ ಕೋರಿಕೆ.

ವಿದೇಶದ ವೃತ್ತಾಂತಗಳು.

ಕಳೆದ ಆಕ್ಟೋಬರ್, ನವಂಬರ್, ಡಿಸಂಬರ್ ಈ ಮೂರು ತಿಂಗಳಲ್ಲಿ ಇಂಗ್ಲೀಷರು ಒಟ್ಟು ೩೬೦೧೯೬೬ ಟನ್ನುಗಳ ಭಾರದ ಹಡಗುಗಳನ್ನು ನಿರ್ಮಿಸಿದ್ದಾರೆ.

ಐರ್ಲಂಡಿನ ಸಿನ್‌ಫಿನಿಯನ್ನರಿಗೂ ಜರ್ಮನ್ ಪ್ರಭುತ್ವದವರಿಗೂ ಸಂಬಂಧವಿರುವುದೆಂಬುದನ್ನು ದೃಢಪಡಿಸತಕ್ಕ ಕೆಲ ಕಾಗದ ಪತ್ರಗಳನ್ನು ಆಂಗ್ಲ ಸರ್ಕಾರದವರು ಈಗ ಪ್ರಕಟಿಸಿದ್ದಾರೆ.

ಬೋಲ್ಶೆವಿಕ್ಕರಿಗೂ ಪರ್ಷಿಯಾದವರಿಗೂ ಸಂಧಿ ನಡೆಯುವುದರಲ್ಲಿದೆ. ಅಲ್ಲಿಯ ಷಾರವರು ಸಿಹ್ಮಾಸನವನ್ನು ಬಿಡುವರೆಂದೂ, ಮಂತ್ರಿಗಳು ರಾಜೀನಾಮೆ ಕೊಟ್ಟಿರುವರೆಂದೂ ಸುದ್ದಿ ಬಂದಿದೆ.

ಫ್ರಾನ್ಸಿನಲ್ಲಿ ಇದುವರೆಗೆ ಇದ್ದ ಲೇಗ್ವೆ ಪ್ರಭುತ್ವದವರೆಲ್ಲಾ ಅಧಿಕಾರಕ್ಕೆ ರಾಜೀನಾಮೆಕೊಟ್ಟರು ನೂತನ ಪ್ರಭುತ್ವವು ಏರ್ಪಟ್ಟಿದೆ. ಅದರಲ್ಲಿ ಮಿ॥ ಬ್ರಯಾಂಡ್‌ರವರು ಮುಖ್ಯ ಮಂತ್ರಿಗಳಾಗಿದ್ದಾರೆ.

ಹಿಮಾಲಯಪರ್ವತದಮೇಲಣ ಎವರೆಸ್ಟ್ ಶಿಖರಕ್ಕೆ ವಿಮಾನಗಳ ಮೇಲೆ ಹೋಗಿ ಸರ್ವೆಮಾಡುವ ಪ್ರಯತ್ನವು ಈಗ ನಡೆದಿದೆ, ಅದಕ್ಕೆ ತಕ್ಕ ಸಹಾಯವನ್ನು ಇಂಡ್ಯಾ ಸರ್ಕಾರದವರು ನಡೆಯಿಸಿಕೊಡುವವರಾಗಿದ್ದಾರೆ.

ಕಪ್ಪುಕಡಲಿನಲ್ಲಿ ಬೋಲ್ಶೆವಿಕ್ಕರ ಹಡಗುಗಳಿಗೂ ಆಂಗ್ಲರ ಹಡಗುಗಳಿಗೂ ಯುದ್ಧವಾಯಿತು. ಬೋಲ್ಶೆವಿಕ್ಕರ ಒಂದು ಯುದ್ಧದ ಹಡಗು ಮುಳುಗಿಹೋಯಿತೆಂದೂ ಇನ್ನೊಂದಕ್ಕೆ ಏಟುಬಿದ್ದು ಕೆಟ್ಟುಹೋಗಿರುವುದೆಂದೂ ಸುದ್ದಿ ಬಂದಿದೆ.

ಗ್ರೀಸ್ ದೇಶದ ಸಿಹ್ಮಾಸನವನ್ನು ಕಾಂಸ್ಟಾಂಟೈನ್ ಪ್ರಭುಗಳು ಹತ್ತಿರುವರು. ಸ್ಮೈರ್ನಾದ ಕಡೆಯಲ್ಲಿ ತುರ್ಕಿ ನ್ಯಾಷನಲ್ ಸೈನ್ಯದ ಮೇಲೆ ಕಾಂಸ್ಟಾಂಟೈನ್ ಪ್ರಭುತ್ವದವರು ಯುದ್ಧಮಾಡಲು ಕೈತಸಜ್ಜರಾಗಿ ಸೈನ್ಯವನ್ನು ಕಳುಹಿಸಿ ಯುದ್ಧ ಮಾಡುತ್ತಿದ್ದಾರೆ.

ಜರ್ಮನರು ಟರ್ಪಿಟ್ಜ್ ಎಂಬ ಹಡಗನ್ನು ಈಗತಾನೇ ಕಟ್ಟಿ ಮುಗಿಸಿದರು. ಆದರಲ್ಲಿ ಜರ್ಮನ್ ನಾವಿಕ ಕೌಶಲ್ಯವೆಲ್ಲವೂ ಮೂರ್ತೀಭವಿಸಿದೆಯಂತೆ. ಈಗ ಪ್ರಪಂಚದಲ್ಲಿರುವ ಹಡಗುಗಳಲ್ಲೆಲ್ಲಾ ಇದೇ ದೊಡ್ಡದು. ಇದರಲ್ಲಿ ೨೦೦೦ ಮಂದಿಗಳು ಕುಳಿತು ಪ್ರಯಾಣ ಮಾಬಹುದಂತೆ.

ಕ್ಷಯ ರೋಗ ನಿವಾರಣೆಗಾಗಿ ಡಾಕ್ಟರ್ ಡಿಯೋರ್ ಕಾರ್ಮೆಟ್ಟ್ ಎಂಬ ಫ್ರೆಂಚ್ ವೈದ್ಯರು ಒಂದು ಹೊಸ ಔಷಧವನ್ನು ಕಂಡುಹಿಡಿದಿದ್ದಾರೆಂದೂ, ಅದನ್ನು ಸಿಡುಬನ್ನು ಹಾಕುವಂತೆ ಮನುಷ್ಯರ ಶರೀರದ ರಕ್ತನಾಳಕ್ಕೆ ಪ್ರವೇಶಗೊಳಿಸತಕ್ಕುದಾಗಿದೆಯೆಂದೂ ಪ್ಯಾರಿಸ್ಸಿನಿಂದ ಸದ್ದಿ ಬಂದಿದೆ.

ಕಲ್ಕತ್ತಾದಲ್ಲಿ ಆಯಾ ವಿದ್ಯಾರ್ಥಿಗಳಲ್ಲಿ ೩೦೦೦ ಮಂದಿಗಳು ಕಳೆದ ಸಂಕ್ರಾಂತಿಯ ದಿವಸ ಪಾಠಶಾಲೆಗಳನ್ನು ಬಿಟ್ಟರು. ಈಗ ಜಾತೀಯ ಪಾಠಶಾಲೆಯು ಅಲ್ಲಿ ಏರ್ಪಟ್ಟಿದೆ. ೬೦೦ ಮಂದಿಗಳು ಅದಕ್ಕೆ ಸೇರಿದ್ದಾರೆ. ಇನ್ನು ೧೫ ದಿನಗಳಲ್ಲಿ ಜಾತೀಯ ವಿದ್ಯಾಲಯವು ಅಲ್ಲಿ ಸ್ಥಾಪಿಸಲ್ಪಡುವುದಂತೆ.

ಭಾರತೀಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಇವರಿಗೆ ಬೇಕಾದ ಸಹಾಯವನ್ನು ಮಾಡುವುದಕ್ಕಾಗಿ ಪ್ಯಾರಿಸ್ ಪಟ್ಟಣದಲ್ಲಿ ಹಿಂದು ಸಭೆಯೊಂದು ಬಹುದೊಂದು ಸ್ಥಾಪಿಸಲ್ಪಟ್ಟಿದೆ. ಪೂರ್ವದೇಶಗಳ ಪ್ರತಿನಿಧಿಗಳ ಮುಖ್ಯಕಾರ್ಯಾಲಯದಲ್ಲಿ ಈ ಸಭೆಯವರು ಒಂದು ನಾಟಕವನ್ನು ಪ್ರದರ್ಶನ ಮಾಡಿದರು.

ಮಧ್ಯಪ್ರಾಂತದಲ್ಲಿ ಅಡಿಷನಲ್ ಜುಡಿಷಿಯಲ್ ಕಮಿಷನರಾಗಿದ್ದ ರಾ॥ ಬ॥ ಆರ್. ಎಸ್. ಮುಧೋಳ್ಕರ್‌ರವರು ಕೀರ್ತಿಶೇಷರಾದರು ಇವರ ಮರ್ಯಾದಾರ್ಥವಾಗಿ ಸರ್ಕಾರಿ ಕಚೇರಿಗಳೆಲ್ಲಾ ಒಂದು ದಿನ ಮುಚ್ಚಲ್ಪಟ್ಟಿದ್ದುವು. ಇವರು ಮಧ್ಯರಾಷ್ಟ್ರದ ಶಾಸನ ಸಭೆಯಲ್ಲೂ ಸಾಮ್ರಾಜ್ಯ ಶಾಸನ ಸಭೆಯಲ್ಲೂ ಸಭಿಕರಾಗಿ ದೇಶಸೇವೆರುನ್ನು ನಡೆಯಿಸಿದವರು.

ತುರ್ಕಿಯ ಸಂಧಿ ನಿಬಂಧನೆಗಳನ್ನು ಸ್ವಲ್ಪ ಸಡಿಲಮಾಡಿಕೊಟ್ಟರೆ ಬೋಲ್ಶೆವಿಕ್ಕರ ಪೂರ್ವ ದೇಶಾಭಿಯೋಗಕ್ಕೆ ತುರ್ಕಿಯು ಪ್ರತಿಬಂಧಕವಾಗಿ ನಿಲ್ಲಬಹುದೆಂದೂ, ಹಾಗಲ್ಲದೆ ಹೋದರೆ ತುರ್ಕಿಯು ಬೋಲ್ಶೆವಿಕ್ಕರ ವಶವಾಗಿ ಆವರ ಪೂರ್ವ ದೇಶಯಾತ್ರೆಗೆ ನಿರುಪಾಧಿಕವಾದೀತೆಂದೂ, ತುರ್ಕಿ ಪ್ರಭುತ್ವದವರು ಆಂಗ್ಲ ಪ್ರಭುತ್ವದಲ್ಲಿ ವಿಶ್ವಾಸವುಳ್ಳವರೇ ಆಗಿರುವರೆಂದೂ ಯುವಸುಲ್ತಾನರು ತಿಳಿಯಿಸಿದ್ದಾರೆ.

ಮದ್ರಾಸಿನಲ್ಲಿ ಡಾಕ್ಟರ್ ಆಚಂಟಿಲಕ್ಷ್ಮೀಪತಿಯವರು ಜಾಯಿಂಟ್ ಸ್ಟಾಕ್ ಕಂಪೆನಿಯ ಮೂಲಕ ಹಿಂದೂ ಔಷಧ ನಿರ್ಮಾಣಾಲಯವೊಂದನ್ನು ಏರ್ಪಡಿಸಿದ್ದಾರೆ. ಇದರ ಪ್ರಾರಂಭೋತ್ಸವವು ಕಳೆದ ಸೋಮವಾರ ಸರ್ ಪಿ. ತ್ಯಾಗರಾಜಚೆಟ್ಟಿಯರಿಂದ ನಡೆಯಿಸಲ್ಪಟ್ಟಿತು. ಈ ಆಲಯದಲ್ಲಿ ಮಾತ್ರೆಗಳು ರಸಾಯನಗಳು ಭಸ್ಮಗಳು ಮೊದಲಾದುವುಗಳೆಲ್ಲಾ ಯಂತ್ರಗಳ ಮೂಲಕವೇ ನಿರ್ಮಿಸಲ್ಪಡುತ್ತವೆ. ಯಂತ್ರಗಳನ್ನೆಲ್ಲಾ ಜೋಡಿಸಿದ್ದಾರೆ.

ಶ್ರೀ ಕನ್ನಾಟ್ ಪ್ರಭುಗಳು ಮದ್ರಾಸಿಗೆ ಬಂದಿದ್ದು ಕಾರ್ಯವನ್ನೆಲ್ಲಾ ಮುಗಿಸಿಕೊಂಡು ಮುಂದಕ್ಕೆ ಪ್ರಯಾಣ ಮಾಡಿದರು. ಆಗ್ಗೆ ಮದ್ರಾಸು ಗೌರ್ನರಿಗೆ ಒಂದು ಸಂದೇಶವನ್ನು ಕಳುಹಿಸಿ ತಮ್ಮ ಸತ್ಕಾರಕ್ಕಾಗಿ ಮಾಡಿದ್ದ ಏರ್ಪಾಟುಗಳಿಗೆಲ್ಲಾ ಸಂತೋಷವನ್ನೂ, ತಮ್ಮ ವಿಷಯದಲ್ಲಿ ಗೌರವವನ್ನು ತೋರಿಸಿದವರಿಗೆಲ್ಲಾ ತಮ್ಮ ವಂದನೆಯನ್ನೂ ತಿಳಿಯಿಸಬೇಕೆಂದೂ ತನಗೆ ಮದ್ರಾಸಿನ ನಿವಾಸವು ಸಂತೋಷಪ್ರದವಾಗಿದ್ದಿತೆಂದೂ ತಿಳಿಯಿಸಿದ್ದಾರೆ.

ದಕ್ಷಿಣಾಫ್ರಿಕಾದಲ್ಲಿದ್ದ ಭಾರತೀಯರಲ್ಲಿ ೧೫೦ ಮಂದಿಗಳು (ಇವರೆಲ್ಲಾ ಮದ್ರಾಸಿನವರು) ಕಳೆದವಾರ ಬೊಂಬಾಯಿಗೆ ಬಂದಿಳಿದರು. ಇವರಿಗೆಲ್ಲಾ ದಾರಿಯ ವೆಚ್ಚವನ್ನೂ ಬಾಡಿಗೆಯನ್ನೂ ದಕ್ಷಿಣಾಫ್ರಿಕಾ ಸರ್ಕಾರದವರೇ ಕೊಟ್ಟು ಕಳಿಹಿಸಿರುವರು. ಇವರುಗಳಲ್ಲಿ ಪ್ರತಿಯೊಬ್ಬರೂ ತಮ್ಮ ಬಳಿಯಲ್ಲಿ ೪೦ ಪೌನುಗಳ ಆಸ್ತಿಯನ್ನು ಮಾತ್ರ ಉಳಿಯಿಸಿಕೊಂಡು ಹೆಚ್ಚಿನ ಸೊತ್ತನ್ನು ಮುರಳಿ ದಕ್ಷಿಣಾಫ್ರಿಕಾ ಪ್ರಭುತ್ವದವರಿಗೆ ಒಪ್ಪಿಸಿಬಿಡಬೇಕಾದ ವರಾಗಿದ್ದಾರೆ. ಅಲ್ಲಿಯ ನಿಯಮವೇ ಹಾಗಿದೆ.

ಆಸ್ಟ್ರಿಯಾ ಪ್ರಭುತ್ವದವರು ತಮಗೆ ವರಮಾನವು ಕಡಿಮೆಯಾಗಿ ಹೋಗಿರುವುದರಿಂದ ರಾಜ್ಯಪರಿಪಾಲನ ಭಾರವನ್ನು ನಿರ್ವಹಿಸುವುದು ಕಷ್ಟವಾಗಿರುವುದೆಂದೂ, ಇದರ ಪರಿಪಾಲನಭಾರವನ್ನೂ, ಯುದ್ಧ ನಷ್ಟ ಪರಿಹಾರಭಾರವನ್ನೂ ಕಮಿಷನ್ನಿನವರಿಗೆ ವಹಿಸಿಬಿಡುವೆವೆಂದೂ ಮಿತ್ರಮಂಡಲಿಯವರಿಗೆ ತಿಳಿಯಿಸಿಬಿಟ್ಟಿದ್ದಾರೆ. ಪ್ರಪಂಚದಲ್ಲಿ ಆಗಾಧವಾದ ಸಾಮ್ರಾಜ್ಯವೆನಿಸಿಕೊಂಡಿದ್ದ ಆಸ್ಟ್ರಿಯಾವಿಗೆ ಯುದ್ಧಾನಂತರದಲ್ಲಿ ಇಂಥ ದಿವಾಳಿಯ ಸ್ಥಿತಿಯು ಪ್ರಾಪ್ತವಾಗಿರುವುದನ್ನು ನೋಡಿದರೆ ದೈವವಿಲಾಸದ ಬಲವತ್ತರತೆಯು ಎಂತಹದೋ ಗೊತ್ತಾಗುವುದು.

ಐರ್ಲಂಡಿನಲ್ಲಿ ಯಾರೂ ಹೊಗೆಸುತ್ತುಗಳನ್ನೂ ಮದದ್ರವ್ಯಗಳನ್ನೂ ಉಪಯೋಗಿಸದೆ ಪರಿತ್ಯಜಿಸಿಬಿಟ್ಟರೆ ಆಂಗ್ಲ ಸಾಮ್ರಾಜ್ಯ ಪ್ರಭುತ್ವದವರಿಗೆ ವರ್ಷಕ್ಕೆ ೨೨೦೦೦೦೦೦ ಪೌನುಗಳವರೆಗೆ ನಷ್ಟವು ಸಂಭವಿಸುವುದೆಂದೂ ಅದುಕಾರಣ ಪ್ರಜೆಗಳೆಲ್ಲರೂ ಅವುಗಳನ್ನು ಪರಿತ್ಯಜಿಸಬೇಕೆಂದೂ ಅಲ್ಲಿಯ ವೆಕ್ಸ್‌ಫರ್ಡ್ ಪ್ರಾಂತದ ಪ್ರಜಾಮಂಡಲಿಯವರು ಸಭೆಯಲ್ಲಿ ನಿಶ್ಚಯಿಸಿರುವರು. ನಮ್ಮ ದೇಶದ ಸಹಾಯನಿರಾಕರಣವಾದಿಗಳು ಕೂಡ ವಿದೇಶ ಮದದ್ರವ್ಯಗಳಿಗೂ ಹೊಗೆಸುತ್ತುಗಳಿಗೂ ಹೀಗೆಯೇ ಬಹಿಷ್ಕಾರಹಾಕಿದರೆ ದೇಶಕ್ಕೆ ಎಷ್ಟೋ ಹಿತವಾದೀತು. ಅದನ್ನೇಕೆ ಬಿಟ್ಟರೋ ತಿಳಿಯದು.

ಕಳೆದ ೧೯೨೦ ನೆ ವರ್ಷದಲ್ಲಿ ಐರ್ಲಂಡಿನೊಳಗೆ ನಡೆದಿರುವ ಅತ್ಯಾಚಾರಗಳನ್ನು ಕುರಿತು ಸರ್ಕಾರದವರು ಪ್ರಕಟಿಸಿರುವ ವರದಿಯ ಪ್ರಕಾರ ಸರ್ಕಾರಿ ಕೋರ್ಟು ಕಚೇರಿಗಳ ಕಟ್ಟಡಗಳು ೬೮ ಹಾಳ್ಮಾಡಲ್ಪಟ್ಟುವು. ಆಂಚೆಯನ್ನು ಅಪಹರಿಸಲಿಕ್ಕೆ ೯೯೫ ಸಲ ಪ್ರಯತ್ನಗಳು ಮಾಡಲ್ಪಟ್ಟುವು. ಆಯುಧ ಸಾಮಗ್ರಿಗಳನ್ನು ಅಪಹರಿಸಲಿಕ್ಕೆ ೨೯೦೧ ಸಲ ಪ್ರಯತ್ನಗಳು ಮಾಡಲ್ಪಟ್ಟುವು. ೧೬೫ ಮಂದಿ ಪೊಲೀಸರು ಕೊಲ್ಲಲ್ಪಟ್ಟರು. ೨೨೫ ಮಂದಿ ಪೊಲೀಸರಿಗೆ ಏಟುಬಿದ್ದುವು. ೫೩ ಮಂದಿ ಸೈನಿಕರು ಕೊಲ್ಲಲ್ಪಟ್ಟರು. ೧೧೯ ಮಂದಿ ಸೈನಿಕರಿಗೆ ಏಟುತಗಲಿವೆ. ೫೩ ಮಂದಿ ಪುರನಿವಾಸಿಗಳು ಸತ್ತರು. ೧೦೯ ಮಂದಿ ಪುರ ಜನರಿಗೆ ಏಟುಬಿದ್ದುವು.

ಬೇಸಾಯಗಾರರಿಗೆ ಬೇಸಗೆ ನೀರನ್ನೊದಗಿಸುವುದು.

ನಮ್ಮ ಸರ್ಕಾರದವರು ಲನೆ ತಾರೀಖಿನ ಮೈಸೂರು ಗೆಜೆಟ್ ವಿಶೇಷ ಪತ್ರಿಕೆಯಲ್ಲಿ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿರುತ್ತಾರೆ.—ಕೃಷ್ಣರಾಜಸಾಗರದ ಜಲಾಶಯದ ನಾಲಾಗಳಿಗೆ ಸಂಬಂಧಪಟ್ಟ ಕೆಳಗೆ ನಮೂದಾದ ಫಾಸಲೆಗಳಲ್ಲಿರುವ ಜಮೀನುಗಳಲ್ಲಿ ೧೯೨೧ ನೆ ವರ್ಷದ ಬೇಸಗೆಯ ತಿಂಗಳುಗಳಲ್ಲಿ ಕಬ್ಬನ್ನೂ ಬತ್ತದವಿನಾ ಇತರ ಬೇಸಗೆಯ ಬೆಳೆಗಳನ್ನೂ ಇಡುವುದಕ್ಕಾಗಿ ಫೆಬ್ರವರಿ ೧೫ ನೆಯ ತಾರೀಖಿನ ಲಾಗಾಯಿತು ಬೇಸಗೆಯ ಕಾಲದಲ್ಲಿ ನೀರನ್ನು ಸರಬರಾಯಿ ಮಾಡಲಾಗುವುದೆಂದು ಈ ಮೂಲಕ ಎಲ್ಲರಿಗೂ ತಿಳಿಯಪಡಿಸಿದೆ:—

೧. ಬಲದಡದ ಕೆಳಮಟ್ಟದನಾಲೆ. ಬೆಳಗೊಳ ಕೆರೆಯ ಕಟ್ಟೆಯ ಎಡತುದಿಯವರೆಗೆ. ಫಾಸಲೆ ೭½ ಮೈಲಿಗಳು.

೨. ಎಡದಡದ ಕೆಳಮಟ್ಟದ ನಾಲೆ. ಒಟ್ಟು ೧೨½ ಮೈಲಿಗಳ ಉದ್ದಕ್ಕೂ.

೩. ರಾಮಸ್ವಾಮಿ ನಾಲೆ. ಮೊದಲಿನ ಅರ್ಧಫಾಸಲೆ. ೨೦¼ ಮೈಲಿಗಳು.

೪. ರಾಜಪರಮೇಶ್ವರಿ ನಾಲೆ. ಮೊದಲ ೧೫½ ಮೈಲಿಗಳ ಫಾಸಲೆ.

೫. ಮಾಧವಮಂತ್ರಿ ನಾಲೆ. ಮೊದಲ ಅರ್ಧಫಾಸಲೆ ೧೩ ಮೈಲಿಗಳು.

ನೀರನ್ನು ಅವಿಚ್ಛಿನ್ನವಾಗಿ ಸರಬರಾಯಿ ಮಾಡುವುದಿಲ್ಲ; ಆಗಾಗ್ಗೆ ನೀರನ್ನು ಬಿಡಲಾಗುವುದು. ಪ್ರತಿ ಪಕ್ಷದಲ್ಲಿಯೂ ಐದು ದಿನಗಳು ಮಾತ್ರ ನಾಲಾಗಳು ತೆರೆಯಲ್ಪಡುವುವು. ಮತ್ತು ಅವಶ್ಯಕವಾದ ರಿಪೇರಿಗಳಿಗಾಗಿ ಮಿಕ್ಕ ಹತ್ತು ದಿನಗಳು ಮುಚ್ಚಲ್ಪಡುವುವು. ನೀರು ಅನವಶ್ಯಕವಾಗಿ ಹಲಾಕಾಗುವುದನ್ನು ತಪ್ಪಿಸುವುದಕ್ಕಾಗಿ ಸರದಿಮೇರೆಗೆ ನಾಲಾಗಳ ಕೆಳಗೆ ಎಂಗಡಿಸಿರುವ ಅನು

ಪತ್ರವ್ಯವಹಾರ.

ರಥೋತ್ಸವ ಸಮಾರಂಭವು.

ವಿರಕ್ತಮಠ ಜಡೆ ತಾ॥ ಸೊರಬ.

ಇದೇ ರೌದ್ರಿ ಸಂವತ್ಸರದ ಮಾಘ ಶುದ್ಧ ೧೫ (ತಾ॥ ೨೨-೨-೧೧) ನೆ ಮಂಗಳವಾರದಿಂದ ಶ್ರೀ ಗುರುಗಳ ರಥೋತ್ಸವ ಕಾರ್ಯಗಳು ಪದ್ಧತಿ ಪ್ರಕಾರ ಈ ನಮ್ಮ ಜಡೆ ವಿರಕ್ತಮಠದಲ್ಲಿ ನೆರವೇರಿಸಲ್ಪಡತಕ್ಕವಿರುತ್ತವೆ. ಆಲ್ಲದೆ ಈ ರಥೋತ್ಸವ ಕಾಲದಲ್ಲಿಯೆ ವೀರಶೈವ ಧರ್ಮೋತ್ತೇಜಕ ಸಭೆಯು ಸಹ ಈ ಜಡೆ ವಿರಕ್ತ ಮಠದಲ್ಲಿ ಕೂಡಿಸಲ್ಪಡತಕ್ಕದ್ದೆಂದು ನಿಷ್ಕರ್ಷಿಸಲ್ಪಟ್ಟಿರುತ್ತದೆ. ಪ್ರಯುಕ್ತ ವೀರಶೈವ ಮತಾಭಿಮಾನಿಗಳಾದ ಸರ್ವರೂ ಈ ಕಾರ್ಯಗಳ ಸಲುವಾಗಿ ಒಂದು ದಿವಸ ಮುಂಚಿತವಾಗಿಯೇ ಇಲ್ಲಿಗೆ ಆಗಮಿಸಿ ಗುರು ಗದ್ದಿಗೆಯ ದರ್ಶನಾದಿಗಳಿಂದುಂಟಾಗತಕ್ಕ ವಿಶೇಷ ಫಲಗಳಿಗೆ ಭಾಗಿಗಳಾಗತಕ್ಕದ್ದಲ್ಲದೆ ಸಭಾಕಾರ್ಯಗಳನ್ನು ಸಾಂಗಗೊಳಿಸಿ ಮತಪುರೋವೃದ್ಧಿ ಕಾರ್ಯಗಳಿಗೆ ಉತ್ತೇಜನವನ್ನುಂಟುಮಾಡಬೇಕೆಂದು ಅಪೇಕ್ಷಿಸುತ್ತೇವೆ.

I. ರಥೋತ್ಸವ ಕಾರ್ಯಗಳ ವಿವರ:—1. ಮಾಘಶುದ್ಧ ೧೫ (ತಾ॥ ೨೨-೨-೧೧) ನೆ ಮಂಗಳವಾರ ಸಾಯಂಕಾಲ ಪುಷ್ಪ ರಥಾರೋಹಣ. 2. ಮಾಘ ಬಹುಳ ೧ (ತಾ॥ ೨೩-೨-೧೧) ನೆ ಬುಧವಾರ ಸಾಯಂಕಾಲಕ್ಕೆ ಮಹಾರಥಾರೋಹಣ. 3. ಮಾಘ ಬಹುಳ ೨ (ತಾ॥೨೪-೨-೧೧) ನೆ ಗುರುವಾರ ಪರಸ್ಥಳದಿಂದ ಬರತಕ್ಕ ಅನಾಥ ವೀರಶೈವ ವಟುಗಳ ಮಾಹೇಶ್ವರ ದೀಕ್ಷಾ ಸಂಸ್ಕಾರ. 4. ಬಹುಳ ೩ (ತಾ॥ ೨೫-೨-೧೧) ನೆ ಶುಕ್ರವಾರ ನುಂಗಳಸ್ನಾನ.

II ವೀರಶೈವ ಧರ್ಮೋತ್ತೇಜಕ ಸಭೆಯ ನಿಬಂಧನೆಗಳು:—1. ಸಭೆಯು (ತಾ॥ ೨೪-೨-೧೧) ನೆ ಗುರುವಾರ ಮತ್ತು (ತಾ॥ ೨೫-೨-೧೧) ನೆ ಶುಕ್ರವಾರ ಈ ಎರಡು ದಿವಸಗಳಲ್ಲಿಯೂ ಹಗಲು ೧೨ ಗಂಟೆಗೆ ಪ್ರಾರಂಭವಾಗಿ ಮತ ಪುರೋವೃದ್ಧಿಗೆ ಸಾಧನ ಭೂತಗಳಾದ ಧಾರ್ಮಿಕ ಸಾಮಾಜಿಕಾದಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಸಂಜೆ ೫ ಗಂಟೆಗೆ ಮುಕ್ತಾಯಮಾಡಲ್ಪಡತಕ್ಕದ್ದು.

ಸೂಚನೆ:—ಪರಸ್ಥಳದಿಂದ ಬರತಕ್ಕ ಮಹನೀಯರುಗಳ ಭೋಜನ ಮತ್ತು ವಾಸ ಇವುಗಳ ಬಗ್ಗೆ ಯೋಗ್ಯ ವ್ಯವಸ್ಥೆಯು ಮಾಡಲ್ಪಡುವುದು.

ಚನ್ನವೀರಯ್ಯನವರು, ಸಭಾ ಕಾರ್ಯದರ್ಶಿ,
ಮತ್ತು ಸರ್ವಾಧಿಕಾರಿ, ವಿರಕ್ತಮಠ.

ಸಿಡ್ಲಘಟ್ಟದ ವರ್ತಮಾನಗಳು.

ಇಲ್ಲಿನ ಮ್ಯುನಿಸಿಪಾಲಿಟಿಯ ರಸ್ತೆ ಮತ್ತು ಚರಂಡಿ ಮೊದಲಾದವುಗಳ ಕಾಮಗಾರಿಗಳು ರಿಫೇರಿ ಕೆಲಸಗಳು ಈಗ್ಗೆ 3 ವರ್ಷಗಳಿಂದಲೂ ನಡೆಯದೆ ಇರುವದರಿಂದ ಜನರಿಗೆ ಅನಾನುಕೂಲವಾಗಿದೆ. ಹೋದ ವರ್ಷಕ್ಕೆ ಮುಂಜೂರಾಗಿರುವ ಕಾಂಗಾರಿಯನ್ನು ಈವರೆಗೂ ಮಾಡಿಸದಿರುವದರಿಂದ, ಈಸಾಲಿಗೆ ಖರ್ಚು ಆಗುವದನ್ನು ಉಳಿಸಿದಂತಾಯಿತಲ್ಲದೆ, ಜನರಿಗೇನೂ ಅನುಕೂಲವಾಗಲಿಲ್ಲ. ಲಾಂದ್ರಗಳು ಕಂಟ್ರಾಕ್ಟ್ ಕೊಡುವದಾಗಿ ಟೆಂಡರು ಕೇಳಿದ್ದ ಮೇರೆಗೆ ಕೆಲವರು ಕೊಟ್ಟ ಟೆಂಡರಿಗೆ ಜವಾಬಿಲ್ಲದೆ, ಅಮಾನಿಯಲ್ಲಿ ಹಚ್ಚಲ್ಪಡುತ್ತಿವೆ. ಈಗ ರಾತ್ರಿ 10 ಗಂಟೆಗೆ ದೀಪ ಆರಿಹೋದರೂ ಯಾರಮೇಲೂ ಆಕ್ಷೇಪಣೆಬಾರದೆ, ಕಂಟ್ರಾಕ್ಟುದಾರನು ಸರಿಯಾಗಿ ದೀಪ ಉರಿಸುವದಿಲ್ಲವೆಂಬ ಒಂದು ನೆಪ ಹೇಳುವದು ಆಶ್ಚರ್ಯವಾಗಿದೆ. ಟವರ್ ಪೊಲೀಸ್ ಸ್ಟೇಷನ್ ಈಗ್ಗೆ 6 ವರುಷಗಳಿಂದಲೂ ಆಗುವದರಲ್ಲಿಯೇ ಇಫೆ. ಜಾಗ್ರತೆ ಏರ್ಪಡಿಸಿದರೆ ಊರಿಗೆ ಕ್ಷೇಮವಾದೀತು. ಬಾಯ್ಸ್‌ಸ್ಕೌಟ್ ಅಸಿಸ್ಟೆಂಟ್ ಡೈರೆಕ್ಟರನರಾದ ಮ॥ ಬಿ. ತಿರುಮಲಾಚಾರ್, ಬಿ. ಎ. ಯವರು ಇದೇ 12 ನೆಯ ತಾರೀಖಿನ ದಿನ ಈ ಊರಿಗೆ ದಯಮಾಡಿಸಿದ್ದು ಸ್ಕೌಟ್ ವಿದ್ಯಾರ್ಥಿಗಳ ಆಟಪಾಟಗಳನ್ನು ಪರಾಂಬರಿಸಿ, ಹೆಚ್ಚಿನ ಮಾಹಿತಿಯನ್ನು ಸ್ಕೌಟ್ ಮಾಸ್ತರುಗಳಿಗೆ ತಿಳಿಸಿದರು. ಈ ದಿನ ಸಾಯಂಕಾಲ ಈ ಊರಿನ ಪ್ರಜಾಪ್ರಮುಖರೂ, ಅಧಿಕಾರಿಗಳೂ, ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳ ಪೋಷಕರೂ, ನೂರಾರು ಮಂದಿ ಸೇರಿ ಇಲ್ಲಿನ ಪ್ರಜಾಮಿತ್ರಮಂಡಲಿಯ ಪ್ರಸಿಡೆಂಟರಾದ ಮ॥ ಎಸ್. ಹಂಪಯ್ಯನವರ ಅಧ್ಯಕ್ಷತೆಯಲ್ಲಿ ಎ. ವಿ. ಸ್ಕೂಲಿನಲ್ಲಿ ಒಂದು ಸಭೆಯನ್ನು ನಡಿಸಿದರು. ಆಗ್ಗೆ ಸ್ಕೌಟ್ ಅಸಿಸ್ಟೆಂಟ್ ಡೈರೆಕ್ಟರವರು ದಯಮಾಡಿ ಉಪನ್ಯಾಸಮಾಡಿದ್ದರಿಂದ ಜನರಿಗೆ ದೇಶಸೇವೆಯ ಮಾರ್ಗವು ಪ್ರಕಾಶವಾಯಿತು. ಅಧ್ಯಕ್ಷರವರು ಸ್ಕೌಟರುಗಳಿಂದ ನಮ್ಮ ಸೀಮೆಯ ಕೆಲವು ಕಡೆ ಆಗಿರುವ ಅಸಾಧಾರಣವಾದ ಉಪಕಾರವನ್ನೂ, ಇದರ ನಿರ್ಮಾಣಕರ್ತರುಗಳಾದ ನಮ್ಮ ಭಾವಂದರವರ ಉದ್ದೇಶವನ್ನೂ ವಿಶದಪಡಿಸಿದ್ದಲ್ಲದೆ, ಈ ಊರಿನಲ್ಲಿ "ಸ್ಕೌಟ್ ಅಸೋಸಿಯೇಷನ್" ಏರ್ಪಡುವದು ಉತ್ತಮವೆಂದು ಸೂಚಿಸಿದರು. ಅದರಂತೆ ಸಿಡ್ಲಘಟ್ಟದ ತಾಲ್ಲೂಕು ಲೋಕಲ್ ಸ್ಕೌಟ್ ಅಸೋಸಿಯೇಷನ್ ಎಂಬ ಹೆಸರಿನ ಸಂಘವು ಏರ್ಪಟ್ಟು ಅದರ ಪ್ರಸಿಡೆಂಟರಾಗಿ ತಾಲ್ಲೂಕು ಅಮಲ್ದಾರರವರು ಇರುವಂತೆಯೂ, ಮ॥ ಎಸ್. ಹಂಪಯ್ಯನವರೂ, ಎ. ವಿ. ಸ್ಕೂಲು ಹೆಡ್ಮಾಸ್ತರವರೂ ಸೇರಿ ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಇರುವಂತೆ ಸರ್ವಾನುಮತಿಯಿಂದ ತೀರ್ಮಾನವಾಯಿತು. ವಿದ್ಯಾರ್ಥಿಗಳಲ್ಲದೆ ವಯಸ್ಕರಾದ ಕೆಲವರು ಸೇರಿದ ಸೀನಿಯರ್ಸ್ ಸ್ಕೌಟ್ ಕೋರ್, ಎಂಬ ಒಂದು ಗ್ರೂಪು ಏರ್ಪಡುವದೆಂದು ತಿಳಿಯಬರುತ್ತದೆ. ದೇಶ ಸೇವೆಯಲ್ಲಿ ಮುಂದುವರಿಯಲು ಪ್ರಯತ್ನಿಸುವ ಇವರಿಗೆ ದೇವರು ಶುಭವನ್ನುಂಟುಮಾಡಲೆಂದು ಪ್ರಾರ್ಥನೆ.

ಒಬ್ಬ ಸಭಿಕ.

ಬಟ್ಟೂರು.

ಸಾಂಗಲೀ ಸಂಸ್ಥಾನ-ಶಿರಹಟ್ಟಿ ತಾಲ್ಲೂಕು ಪೈಕೆ ಬಟ್ಟೂರೆಂಬ ಸಣ್ಣ ಗ್ರಾಮವಿರುವುದು. ಈ ಗ್ರಾಮದಲ್ಲಿ ವೀರಶೈವರು ಸ್ವಲ್ಪ ಜನರಿದ್ದಾಗ್ಯೂ ಇಲ್ಲಿರುವ ಬ್ರಾಹ್ಮಣ ಮುಂಡಿಗಿಯವರೂ ಇತರ ಸಮಾಜದವರೂ ಕೇವಲ ಭಕ್ತಿವಂತರೂ ಪರಸ್ಪರ ಸಹಾನುಭೂತಿಯುಳ್ಳವರೂ ಇರುವದರಿಂದ, ಈ ಗ್ರಾಮಕ್ಕೆ ಅನೇಕ ಶ್ರೀ ಸ್ವಾಮಿಗಳವರು ಆಗಮಿಸಿ ಈ ಗ್ರಾಮದ ಸರ್ವ ಭಕ್ತ ಮಂಡಳಿಯವರಿಗೂ ದರ್ಶನಾಶೀರ್ವಾದಗಳನ್ನು ಕೊಡುತ್ತಾ ಇರುತ್ತಾರೆ. ಇಲ್ಲಿಯ ವೀರಶೈವರಲ್ಲಿ ಪ್ರಮುಖರಾಗಿದ್ದ ಹಿರೇಮಠದ ಚನ್ನವೀರಯ್ಯನವರೆಂಬುವರು ಶೀವಾಧೀನವಾದೀಚೆಗೆ ವೀರಶೈವರಲ್ಲಿ ಪರಸ್ಪರ ಮನಸ್ತಾಪಗಳುಂಟಾಗಿ ಎರಡು ಪಂಗಡಗಳುಂಟಾಗಿದ್ದವು. ತಾರೀಖು ೯-೧-೧೯೨೧ ನೆ ದಿವಸ ದಾವಣಗೆರೆ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಹಿರೇಮಠದ ರಾಚಯ್ಯನವರು ವ ಸೂರಣಿಗಿ ಮಲ್ಲಪ್ಪ ಇವರ ಪ್ರಾರ್ಥನೆಯ ಮೇರೆಗೆ ದಯಮಾಡಿಸಿದರು. ಈ ದಿವಸವೇ ಸಂಗೀತ ಸ್ವಾರಸ್ಯಪರರಾದ ಸಂಗಳಿಯಂಬುವರಿಂದ ಸುಶ್ರಾವ್ಯಶಿವಕೀರ್ತನೆಯಾಯಿತು. ಬಟ್ಟೂರ ಗ್ರಾಮದಲ್ಲಿ ಪೈರು ಚನ್ನಾಗಿ ಬಾರದೆ ಜನರಿಗೆ ಬಹಳ ತೊಂದರೆ ಇದ್ದರೂ ಭಕ್ತಿಪರರಾದ ಇಲ್ಲಿಯ ಜನರು ಶ್ರೀ " " ಗಳವರ ಸೇವೆಯಲ್ಲಿ ನಿರತರಾಗಿದ್ದರು. ಕೀರ್ತನಾಂತರದಲ್ಲಿ ಶ್ರೀಯುತ ಬಟ್ಟಪ್ಪ ತಟ್ಟಿ ಇವರಿಂದ ವಿದ್ಯಾ ಮತ್ತು ವ್ಯವಸಾಯ ಸುಧಾರಣೆ ವಿಷಯವು ವೇ॥ ಚನ್ನಬಸವಯ್ಯ ಹೇಮಗಿರಿ ಮಠ ಇವರಿಂದ ಸಮಾಜ ಸುಧಾರಣೆಯ ಐಕಮತ್ಯದ ವಿಷಯವೂ ಆ ಮೇಲೆ ಶ್ರೀ " " ಸನ್ನಿಧಾನದಿಂದ ಸತ್ಯ, ಸದಾಚಾರ, ಭಕ್ತಿ ಮಹತ್ವ ಈ ವಿಷಯಗಳೂ ತಿಳಿಸಲ್ಪಟ್ಟವು. ಗೂರನೇ ದಿನಸ ವೀರಶೈವರಲ್ಲಿಯ ಮನಸ್ತಾಪಗಳನ್ನು ನಿವಾರಿಸಿ, "ಹಿತೋಪದೇಶಕ" ಸಂಘವು ಅವಶ್ಯ ಇರಬೇಕೆಂದು ಅಪ್ಪಣೆಯಾದ ಮೇರೆಗೆ ಸಘಸ್ಥಾಪನೆಯಾಗಿ ಸಂಘದ ವತಿಯಿಂದ ಲೈಬ್ರರಿ (ವಾಚನಾಲಯ) ಯೂ ಸ್ಥಾಪಿತವಾಗಿ, ಬಸೆಟ್ಟಪ್ಪ ತಟ್ಟಿ ಇವರು ಪ್ರೆಸಿಡೆಂಟರಾಗಿಯೂ, ಮುರಿಗೆಯ್ಯನವರು ವೈಸ್ ಪ್ರೆಸಿಡೆಂಟರಾಗಿಯೂ, ಚಿದಂಬರರಾವಕುಲಕರ್ಣಿಯವರು ಚೇರಮನ್ನರಾಗಿಯೂ, ಹೆಡ್‌ಮಾಸ್ತರರು ಸೆಕ್ರೆಟರಿಯಾಗಿಯೂ, ೧. ರಾತಯ್ಯ ಹಿರೇಮಠ ೨. ಸಿದ್ರಾಮಯ್ಯ ಬಾಳೆಹಳ್ಳಿ ಮಠ ೩. ಕೆಂಚನಗೌಡ ಪಾಟೀಲ ೪. ಪರಪ್ಪ ದಂಡಣ್ಣವರ ೫. ಬಸಪ್ಪ ಆಂಗಡಿ ೬ ಮಲ್ಲೇಶಪ್ಪ ಗಾಣಿಗೇರ ೭. ಫಕ್ಕೀರಪ್ಪ ಮೇಟಿ ೮. ಬಾಳಪ್ಪ ಕುಲಕರ್ಣಿ ೯. ಗೋವಿಂದರಾವ ಕುಲಕರ್ಣಿ ೧೦. ಬಸೆಟ್ಟಪ್ಪ ಆಂಗಡಿ ಇವರು ಮ್ಯಾನೇಜಿಂಗ್ ಕಮಿಟಿ ಮೆಂಬರರಾಗಿಯೂ ನೇಮಿಸಲ್ಪಟ್ಟರು. ಈ ಕೆಳಗೆ ಕಂಡಂತೆ ಶಕ್ತಯವು ದೊರೆಯಿತು. ೧. ಮೈಸೂರು ಸ್ಕಾರ್ ಶ್ರೀಗಳವರಿಂದ ಆಶೀರ್ವಾದ ೨. ಚಂದ್ರೋದಯ ರಾಚಯ್ಯ ಹಿರೇಮಠ ಇವರಿಂದ ೩. ಕರ್ನಾಟಕ ಸೈಮ್ಸ್, ೪. ಮಾಸಿಕ ಪತ್ರ ೧ ಬಸೆಟ್ಟಪ್ಪ ತಟ್ಟಿಯವರಿಂದ ೫. ಸದ್ಗುರು ಮಾಸಪತ್ರ ತಿಪ್ಪಣ್ಣ ಗಾಂಜಿ ಇವರಿಂದ ೬. ಕರ್ನಾಟಕ ಮಿತ್ರ ಪರಪ್ಪ ದಂಡಣ್ಣನವರ ಇವರಿಂದ. ಈ ಪ್ರಕಾರ ೬ ಪತ್ರಿಕೆಗಳನ್ನು ತರಿಸಿಕೊಡಲು ವಾಗ್ದಾನವಾಗಿ ತಕ್ಷಣವೇ ಪತ್ರಿಕೆಗಳಿಗೆ ಬರೆಯಬೇಕೆಂದು ನಿರ್ಧರಿಸಲಾಯಿತು. ಐಕಮತ್ಯವಾದರೆ ಯಾವ ಕೆಲಸತಾನೇ ಆಸಾಧ್ಯ? ಶ್ರೀ ಗುರುಗಳವರ ಅಪ್ಪಣೆಯಿಂದ ಸ್ಥಾಪನೆಯಾಗಿರುವ ಈ ಹಿತೋಪದೇಶಕ ಸಂಘದ ಸವ್ಯವಸ್ಥೆಯನ್ನು ಕಾಪಾಡಿಕೊಳ್ಳುವದು ಬಟ್ಟೂರು ಪ್ರಮುಖ ಜನರ ಮುಖ್ಯ ಕರ್ತವ್ಯವಾಗಿದೆ. ಧಾರವಾಡ ಹಾವೇರಿ ಪೇಟೆ ಮುರುಘಾಮಠದ ಶ್ರೀ ಬೋರ್ಡಿಂಗಿಗೆ ಬಟ್ಟೂರ ಭಕ್ತ ಜನಗಳು ಶಕ್ತ್ಯನುಸಾರ ಸೇವೆಯನ್ನು ಒಪ್ಪಿಸಿದರು. ಅದರ ವಿವರ—ರಾಚಯ್ಯನವರು ಹಿರೇಮಠ ವರ್ಷಕ್ಕೆ ೧೨ ರೂ. ಕೆಂಚನಗೌಡ ಪಾಟೀಲ ವರ್ಷಕ್ಕೆ ೪ ರೂ. ಮಲ್ಲಪ್ಪ ವ ಹೂಮಣ ಸೂರಣಿಗೆ ವರ್ಷಕ್ಕೆ ೧೨ ರೂ. ಮಲ್ಲನಗೌಡ ಪಾಟೀಲ ಕುಂದ್ರಳ್ಳಿ ವರ್ಷಕ್ಕೆ ೨ ರೂ. ಈ ಪ್ರಕಾರ ವರ್ಷಾಶನ ಒಪ್ಪಿಸುವುದಾಗಿ ಪ್ರಾರ್ಥಿಸಿಕೊಂಡರು. ಅಕ್ಕೆಗುಂದ ಮಠದ ಉದ್ದಾನಯ್ಯನವರು ಬೋರ್ಡಿಂಗ್ ವಿದ್ಯಾರ್ಥಿಗಳಿಗಾಗಿ (೧೦೦೫) ಒಂದು ಸಾವಿರ ಐದು ಉತ್ತಮ ಮಾವಿನ ಹಣ್ಣುಗಳನ್ನು ಕಳಿಸಲು ಒಪ್ಪಿದರು.

ಪ್ರತ್ಯಕ್ಷದರ್ಶಿ.

ಆರೋಗ್ಯಜೀವನ.

ರೋಗವೇ ಉಂಟಾಗದಂತೆ ನಡೆದುಕೊಳ್ಳಬೇಕಾದ ಎಲ್ಲಾ ರೀತಿಗಳನ್ನೂ, ಒಂದುವೇಳೆ ರೋಗವುಂಟಾದರೆ ಈಗ ಅಮೆರಿಕಾ ಖಂಡದಲ್ಲಿ ಬಹು ಪ್ರಸಾರ ಹೊಂದಿರುವ ಲಂಘನ ಚಿಕಿತ್ಸೆಯಿಂದ ಅದನ್ನು ನಿವಾರಣೆ ಮಾಡಿಕೊಳ್ಳುವ ವಿಧಾನವನ್ನೂ ಈ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದೆ.

ಸ್ವಲ್ಪವೂ ಹಣವನ್ನು ವೆಚ್ಚಮಾಡದೆ, ವೈದ್ಯರ ಮತ್ತು ಡಾಕ್ಟರರ ಮನೆಗಳಿಗೆ ಓಡಾಡದೆ, ಆರೋಗ್ಯಭಾಗ್ಯವನ್ನು ಹೊಂದಿ ಸುಖಿಸುವ ಸುಲಭೋಪಾಯಗಳನ್ನು ತಿಳಿಸುವಂತಹ ಈ ಪುಸ್ತಕವು ಕನ್ನಡ ಭಾಷೆಯಲ್ಲಿಯೇ ಹೊಸದೆಂಬುದು ವಾಚಕರಿಗೆ ವೇಷ್ಯವಾಗದೆ ಇರಲಾರದು. ಕ್ರಯ ೮ ಆಣೆ.

2 ವಿಳಾಸ—ಎಂ. ಎಂ. ಹರ್ಡೆಕರ್, ದಾವಣಗೆರೆ.

ಜರ್ಮನ್ ಬೆಳ್ಳಿಯ ರಿಸ್ಟ್‌ವಾಚ್.



18

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವುದು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇದನ್ನು ಕೈಯ್ಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯ್ಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—0—0.

ರೈಲ್ವೇಲೀವರ್ ವಾಚ್.

5 ವರ್ಷ ಗ್ಯಾರಂಟಿ; 15 ಬಹುಮಾನಗಳು ಸಹಿತ 5—0—0

ಇದು ಒಳ್ಳೇ ಮಜಬೂತಾಗಿ ಘಾಳಿ ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ಇವು ವಿಲಾಯತಿಯಲ್ಲಿ ತಯಾರಾದದ್ದು. ಲೀವರ್ ಮೆವೋಟ್ಸ್‌ಗಳಿಂದ ಮಾಡಿಲಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿದೆ. ನಿಕ್ಕಲ್ ಕೇಸಿನ ಮುಚ್ಚಳವೂ ಇದೆ. ಒಂದನ್ನು ತರಿಸಿ ನೋಡಿರಿ. ಈ ನಮ್ಮ ಗಡಿಯಾರವು ಲೋಕ ಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು.—ತುರಾಯಿ 1, ಶಾವಂತಿಗೆ ಹುವ್ವು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1 ಸರಪಣಿ 1, ಉತ್ತರಮುಖಿ 1, ದಂತದ ಕನ್ನಡಿ 1, ಹೇರಾಯಿಲ್ ಸೀಸೆ 1, ಪರಟು ಗುಂಡಿಗಳು ೪, ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಉಂಗುರ 1, ರಾಗಮಾಲಿಕೆ 1. ಜುಮ್ಲಾ 15 ಬಹುಮಾನಗಳ ಸಹಿತ ಗಡಿಯಾರ 1ಕ್ಕೆ ಕ್ರಯ ರೂ. 5-0-0.

Elgin Watch Co.,
89 Narayana Mudaly Street, Madras.

ಫಕ್ಕ ಶೋಧಕ ! ಮನೋಲ್ಲಾಸಕವೆಂಬ ಧಾತುಪುಷ್ಟಿಕ !!

ಮಹದ್ರಾಕ್ಷಾದಿ ಚೂರ್ಣವು 16

ಈ ಔಷಧಿಯು ಅತ್ಯುತ್ತಮವಾದುದೆಂದು ಬಸವರಾಜೀಯಾದಿ ಸುಪ್ರಸಿದ್ಧ ಪಂಡಿತ ವೈದ್ಯಗ್ರಂಥಗಳಲ್ಲಿ ಹೇಳಲ್ಪಟ್ಟ ವಿಷಯವು ತಮಗೆ ವೇದ್ಯವಾಗಿರುವುದಷ್ಟೆ. ಕೆಳಗೆ ಕಂಡ ರೋಗಗಳಿಗೆ ಮಾತ್ರ ಬಹು ನಂಬುಗೆಯಾದುದೆಂದು ಅನೇಕ ರೋಗನಿವಾರಣೆಯಾದವರು ವೈದ್ಯರು ಬಹಳ ಶ್ರೇಯಸ್ಸು ಮಾಡಿರುವರು. ಇದನ್ನು ಒಬ್ಬ ಮನುಷ್ಯನು ೨೧ ದಿನ ಸೇವಿಸಿದರೆ, ಕ್ಷಯರೋಗ, ಪಿತ್ತರೋಗ, ಮೇಹರೋಗಗಳು, ಪಾಂಡುರೋಗ, ಪೀನಸ, ಕುಷ್ಟರೋಗ, ಭಗಂದರವು, ಮೂತ್ರ ಕೃಚ್ಛರೋಗ, ದೀರ್ಘಜ್ವರ ಉಬ್ಬಸ ವಾಕರಿಕೆ, ಸನ್ನಿಪಾತರೋಗ, ಕಣ್ಣು ಉರಿಯುವುದು, ಅಂಗಾಲು ಅಂಗೈ ಬಿರಿಯುವುದು, ತಲ್ಲಿಶಕೆ, ಚುರುಕು, ಉಷ್ಣ, ಬಿಳುಪು, ಹಸರು ಹೋಗುವದು, ಮೂತ್ರದೊಂದಿಗೆ ಧಾತು ಹೋಗುವುದು, ನಪ್ತೆಂದ್ರಿಯಾಗುವದು, ಸೊಂಟನೋವು, ಎಲ್ಲಾವಿಧ ವಾತಶೂಲೆಗಳು ಇವೇ ಮೊದಲಾದ ರೋಗಗಳನ್ನು ಖಂಡಿತವಾಗಿ ಗುಣಪಡಿಸಿ, ಮನುಷ್ಯನ ಕಾಂತಿಯನ್ನು ಹೆಚ್ಚಿಸುವದು. ರಕ್ತವನ್ನು ವೃದ್ಧಿಗೊಳಿಸಿ, ಧಾತುಪುಷ್ಟಿಯನ್ನುಂಟುಮಾಡಿ ದೇಹಾಂಗಕ್ಕೆಲ್ಲಾ ಅಧಿಕಬಲವುಂಟಾಗಿ, ರತಿಸುಖಕ್ಕೆ ಆನಂದವನ್ನುಂಟುಮಾಡುವದು. ಮತ್ತು ಸ್ತ್ರೀಯರಿಗೆ ವಂಧ್ಯಾದೋಷಗಳಿಂದುತ್ಪನ್ನವಾಗುವ ಕ್ರೂರತರವಾದ ಹೊಲೆಕುಟ್ಟು, ಹೊಟ್ಟೆಶೂಲೆ ಬಿಳಿಶರಗು ಹೋಗುವಿಕೆ, ರಕ್ತಪ್ರವಾಹವಾಗುವಿಕೆ, ಕಾಲಕ್ಕೆ ಸಂಯೋಗಿ ಮುಟ್ಟಾಗದಿರುವಿಕೆ, ಕೈಕಾಲುಹರಿಯುವಿಕೆ, ಇತ್ಯಾದಿ ದೋಷಗಳಿಂದ ದೇಹವು ಕ್ಷೀಣವಾಗಿ ಗರ್ಭಕೋಶಕ್ಕೆ ತೊಂದರೆಯುಂಟಾಗಿ, ಸಂತಾನಭಂಗಕ್ಕೆ ಕಾರಣವಾಗುವುದು. ಇತ್ಯಾದಿ ದೋಷಗಳಿಂದವೆಧಪಡತಕ್ಕ ಸ್ತ್ರೀಪುರುಷರಿರ್ವರು ಕ್ರಮವಾಗಿ ಒಂದು ಮಂಡಲ ಪರಿಯಂತ್ರದವರಿಗು ಸೇವನೆ ಮಾಡಿದರೆ ಗರ್ಭ ಧರಿಸುವದಕ್ಕೆ ಸಂಶಯವಿಲ್ಲವೆಂದು ಸುಪ್ರಸಿದ್ಧವಾಗಿದೆ. ಈ ಔಷಧಿಯನ್ನು ನಾವು ನಮ್ಮ ಕೈಯಿಂದ ಅನೇಕ ಜನಗಳಿಗೆ ಕೊಟ್ಟು ಪರೀಕ್ಷೆ ಮಾಡಿದ ಕಾರಣ ತುಂಬಾ ಅನುಭವಕ್ಕೆ ಬಂದಿರುತ್ತದೆ. ಆದ್ದರಿಂದ ಇದನ್ನು ಪರೋಪಕಾರಾರ್ಥವಾಗಿ ಪ್ರಚಾರಪಡಿಸಿರುತ್ತೇವೆ. ಇದರಲ್ಲಿ ಯಾವ ವಿಧವಾದ ಮೋಸವಿಲ್ಲ. ಹಾಗೇನಾದರೂ ವಂಚನೆಯು ಕಂಡುಬಂದಲ್ಲಿ ನಿಮ್ಮ ಹಣವನ್ನು ವಾಪಸು ಕೊಡಲು ಸಿದ್ಧರಾಗಿರುತ್ತೇವೆ. ಜ್ವರಸಂಜೀವಿನಿ ಮಾತ್ರೆಗಳು ೧ ಡಜನ್, ಇದರ ಸೇವನೆಯಿಂದ ಚಾತುರ್ಥಿಕಜ್ವರ, ಸರ್ವಜ್ವರ, ದಿನಬಿಟ್ಟುದಿನ ಬರುವ ಜ್ವರ, ವಾತಜ್ವರ, ಪಿತ್ತಜ್ವರ, ಆಸ್ತಗತಜ್ವರ, ಎಂಥಾ ಕ್ರೂರತರವಾದ ಜ್ವರವಾದರೂ ತಕ್ಷಣದಲ್ಲಿಯೇ ನಿಲ್ಲುತ್ತದೆ. ಇದು ಬಹು ಆಶ್ಚರ್ಯಕರವಾದದ್ದು. ಕಫ ರೋಗಸಂಜೀವಿನಿ ೧ ಡಜನ್ ಮಾತ್ರೆಗಳು. ಇದರ ಸೇವನೆಯಿಂದ ಶ್ಲೇಷ್ಮ, ಕೆಮ್ಮು, ಉಬ್ಬಸ, ಎದೆನೋವು, ಪಕ್ಕೆನೋವು, ಕೊತಿಕೆಮ್ಮು ಇವುಗಳನ್ನು ತಕ್ಷಣದಲ್ಲಿಯೇ ಅಂದರೆ ೩ ಒಪ್ಪತ್ತಿನಲ್ಲಿ ಗುಣಪಡಿಸುತ್ತದೆ. ಈ ೨ ಔಷಧಿಗಳನ್ನು ನಮ್ಮ ಮಹದ್ರಾಕ್ಷಾದಿ ಚೂರ್ಣವನ್ನು ತರಿಸಿಕೊಳ್ಳುವವರಿಗೆ ಉಚಿತವಾಗ

6/7 Home (M&) Dept.

[Census classification – Veerashaivaites.]

(Approved) [C No. 589] Memorial from Chetti Nagichettiar d/ 1.2.1921

Endt 589-1 d/8.2.21

Referred to the Superintendent, Census Operations, for remarks.

Rai 10.2.21

DESPATCHED 11 FEB. 1921 with Encls

Sd 7.2.21

To

The Supdt, Census Operations
(Endt circle current in original to be returned circle reply.)

S.V.R. 4.2.21

Sd 5.2.21

Reminder after one month

Sd

C.F.—29.

Law (Miscellaneous) **DEPARTMENT.**

20-FEB-1921

C. No. 838

Received ..... 191 . *Registered* 21.2.1921.

Subject.

Returning with remarks Government Endt. on the application of Mr. Chetti Nagichettiar regarding the entry of Lingayats in the Census Enumeration Book.

ENCLOSURES.
No. Two
Spare copies -Nil-

No. 810.

Station Madras , *Dated the* 19th February 1921.

From (*Name*) G. T. Boag Esq., I.C.S.,

(*Designation*) Superintendent of Census Operations, Madras

To The Secretary to the Government of Madras,

Law (Miscellaneous) Department.

Sir,

I have the honour to resubmit the enclosures received with Endorsement No.589-1, dated 8th February 1921.

2. Mr. Chetti Nagichettiar belongs to that section of the Lingayat community who wish to be entitled 'Virasaivites'. He wishes his section of the Lingayat community to be differentiated from other sections, known by other names, which he mentions at the end of paragraph 4 of his letter.

3. So far as concerns the returns on the Enumeration Schedule, I have repeatedly issued instructions that caste

is

9/

is to be recorded as each person describes himself; those therefore who return their caste as Virasaivites or Virasaiva Brahmans should be so recorded by the Enumerators.

4. In the last Census Report in the Index of Castes I find Lingayats mentioned, as also Pandarams, Jangams, Devangas, Kurubas, and also Kannadiyars. From paragraph 5 of the letter it appears that Virasaivite is the name of a religious sect rather than of a caste; and in any case whether ~~Lingayat~~ Virasaivite is treated as the name of a sect or as the name of a caste, in view of the orders of Government that neither Hindu sects nor sub-divisions of castes should be separately recorded at this Census, Mr. Nagichettiar's requests are inadmissible. At the same time, I am inclined to agree with his contention that the term Lingayat as the name of a caste is incorrectly used in the 1911 Census Report. Lingayat really is the name of a Hindu Sect; the stricter Lingayats, of whom Mr. Nagichettiar is a representative, repudiate all idea of caste, and deny Brahman supremacy even in matters religious; they do not admit to their society those others whose only claim to membership of the Lingayat community is that, in Mr.Nagichettiar's words, "they wear Lingam round their neck". Under the head 'Lingayat' in 1911 were included those whom Mr.Nagichettiar would call Virasaivites and also many of those mentioned at the end of paragraph 4 of the letter. Incorrect as this may be, it is not easy to see how to get over it so long as all sorts and conditions of people return their caste as 'Lingayat'.

I have the honour to be,

Sir,

Your most obedient servant,

Superintendent of Census Operations,

M a d r a s.

Sectt. II-10 (δ)—12-1-16. HOME (MISCELLANEOUS) DEPARTMENT

CENSUS

Petition from Mr. Chetti Nagichettiar, Madras, regarding caste classification of Veerashaivaites.

9

READ AGAIN G.O. No. ....., dated ..... 191 .

" " " " ....., " ..... 191 .

READ ALSO:—

(C. No. 589), From the Mr. Chetti Nagichettiar, Madras, No. ..., dated 1st February 1921. (hp 1-5 cf)

" ("), Endt. to the Supdt. Census Operations No. 589-1, Home (Mis), " 8th February '21 (hp 6 cf)

" (C. 838), From " --do-- No. 810, " 19th February '21 (hp 7-8 cf)

ORDER. No. 328, dated 3-3- 191 7

Mis

(para 3 of the Census Supdt's letter on hp 7-8 cf)

The memorialist is informed that the instructions to the enumerators are to enter the name of the caste which each person gives of himself and that any member of the Lingayat community who returns his caste as Virasaivite or Virasaiva Brahman will be so recorded at the ensuing Census.

DESPATCHED 4 MAR 1921

To

M.R.Ry. Chetti Nagichettiar Avl
Govt. Pensioner & Merchant
46, Anumantaroyen street,
Park Town, Madras.
(q of I only & o)

Copy to the Supdt, Census Operations, Madras. (q of I to III & o)

S.A.R. 28.2.21

Ld 1/3/21

Secy. 2/3/21

Ld 28/2/21

When given for copying
When copied
When examined
When signed } 192

Dft 3/3

HAD AGAIN G.O. No. DATED
192

CONTENTS No.

ENCLOSURES TO G. No.

ORDER OF GOVERNMENT	A	A	A	A	A	A	A	
LETTER OF GOVERNMENT.								
STATEMENT WITH DITTO.								
PAPERS NOT FILED UP, BEING MEANT FOR DESPATCH IN ORIGINAL.								

N.B.—

A = Copy in full.
B = Not to be copied.
P = Copy abstract only.
Q = Copy heading only.